G.O.NO. (01)

No.AaAa/Kavru/Savagruhasa/02-03/13450.

To:
The Commissioner,
Directorate of Disabled persons,
No.10.Tambuchètti Road.
Cooks town.Banglalore-6.

Sir,

Sub: Providing reservation for the Disabled persons in the Allotment of the Government Quarters.
Ref: Your letter No.AmAaNi/97/02-03/1258, dated 6.3.03.

According to para 7(11) of Government Order No. P W D/245/PPM 96 dated 22.1.99. there is 2% reservation for the disabled government officers/ officials in the allotment of government quarters. Accordingly, the allotment of Government Quarters is being done by the Government Quarters allotment Committee. While allotting government quarters to the disabled persons, ground floor quarters will be allotted to them. This is here by brought to your kind notice.

Yours faithfully,

Sd/-
Superintendening Engineer,
Building Circle, Bangalore.

# ಭಾಗ IV ಸೆಕ್ಷನ್ ೨-ಎ (i)

## ಕೇಂದ್ರದ ಮತ್ತು ರಾಜ್ಯದ ಶಾಸನಗಳ ಮೇರೆಗೆ ರಾಜ್ಯ ಸರ್ಕಾರದವರು ಹೊರಡಿಸಿದ ಶಾಸನಬದ್ಧ ಸಾಮಾನ್ಯ ನಿಯಮಗಳು ಮತ್ತು ರಾಜ್ಯಾಂಗದ ಮೇರೆಗೆ ರಾಜ್ಯಪಾಲರು ಮಾಡಿದ ಅಧಿನಿಯಮಗಳು

**ಲೋಕೋಪಯೋಗಿ ಸಚಿವಾಲಯ**

ಅಧಿಸೂಚನೆ ಸಂಖ್ಯೆ ಪಿ.ಡಬ್ಲ್ಯೂಡಿ 245 ಪಿಪಿಎಂ 96,

ಬೆಂಗಳೂರು, ದಿನಾಂಕ 22-01-1999.

ಕರ್ನಾಟಕ ಸಿವಿಲ್ ಸೇವೆಗಳ ನಿಯಮಗಳು 75ನೇ ನಿಯಮದ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ, ಬೆಂಗಳೂರಿನಲ್ಲಿರುವ ಸರ್ಕಾರೀ ವಸತಿ ಗೃಹಗಳ ಹಂಚಿಕೆಯನ್ನು ಮಾಡಲು ಈ ಮುಂದಿನ ನಿಯಮಗಳನ್ನು ರಚಿಸಿದೆ.

**1.ಶೀರ್ಷಿಕೆ ಮತ್ತು ಪ್ರಾರಂಭ.**-(1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ (ಸರ್ಕಾರಿ ವಸತಿ ಗೃಹಗಳ ಹಂಚಿಕೆ) ನಿಯಮಗಳು, 1999 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಬೆಂಗಳೂರಿನ ಜೀವನ ಬೀಮಾನಗರ, ವಸಂತನಗರ, ಜಯಮಹಲ್, ರಾಜಾಜಿನಗರ, ಜಯನಗರ, ವಿಲ್ಸನ್ ಗಾರ್ಡನ್, ತಿಮ್ಮೇನಹಳ್ಳಿ, ಯಲಹಂಕ, ಕೆಂಗೇರಿ, ಆರ್.ಟಿ.ನಗರ, ನಂದಿನಿ ಲೇಔಟ್, ಕೋರಮಂಗಲ ಮತ್ತು ರಾಜಮಹಲ್ ವಿಲಾಸ್ ಬಡಾವಣೆಗಳಲ್ಲಿರುವ ಸರ್ಕಾರಿ ವಸತಿ ಗೃಹಗಳಿಗೆ ಮತ್ತು ಮುಂದೆ ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ ಸ್ವಾಧೀನಪಡಿಸಿಕೊಳ್ಳಬಹುದಾದಂಥ ಇತರ ವಸತಿ ಗೃಹಗಳ ಹಂಚಿಕೆಗೆ ಅನ್ವಯವಾಗತಕ್ಕುದ್ದು.

(3) ಇವು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು**-(1) ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ) "ಹಂಚಿಕೆ " ಎಂದರೆ ಸರ್ಕಾರಿ ನೌಕರನಿಗೆ, ಲೈಸೆನ್ಸ್ ಶುಲ್ಕದ ಸಂದಾಯದ ಮೇಲೆ ವಾಸದ ಉದ್ದೇಶಕ್ಕಾಗಿ ಮಾಡುವ ವಸತಿ ಗೃಹದ ಹಂಚಿಕೆ;

(ಬಿ) "ಶೈಕ್ಷಣಿಕ ವರ್ಷ"ಎಂದರೆ ಜೂನ್ 1 ರಿಂದ ಮುಂದಿನ ವರ್ಷದ ಮೇ 31 ರವರೆಗೆ;

(ಸಿ) "ಹಂಚಿಕೆ ಪಡೆದವ"ಎಂದರೆ ಈ ನಿಯಮಗಳ ಮೇರೆಗೆ ವಸತಿ ಗೃಹ ಹಂಚಿಕೆಯಾಗಿರುವ ಸರ್ಕಾರಿ ನೌಕರ;

(ಡಿ) "ಕುಟುಂಬ" ಎಂದರೆ ಸರ್ಕಾರಿ ನೌಕರರ:ಳ ಹೆಂಡತಿ ಅಥವಾ ಗಂಡ, ಜೊತೆಯಲ್ಲಿ ವಾಸಿಸುವ ಮತ್ತು ಸರ್ಕಾರಿ ನೌಕರನನ್ನು ಆಶ್ರಯಿಸಿರುವ ಕಾನೂನು ಸಮ್ಮತ ಮಕ್ಕಳು ಮತ್ತು ಮಲಮಕ್ಕಳು;

(ಇ) "ಸರ್ಕಾರಿ ನೌಕರ"ಎಂದರೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಅನ್ವಯಿಸುವ ಸೇವಾ ಷರತ್ತುಗಳಿಗೆ ಒಳಪಟ್ಟ, ರಾಜ್ಯ ಸರ್ಕಾರದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಎ.ಬಿ.ಸಿ. ಮತ್ತು ಡಿ ಸಮೂಹಗಳಿಗೆ ಸೇರಿದ ಸರ್ಕಾರಿ ನೌಕರರು ಮತ್ತು ಸಂದರ್ಭಾನುಸಾರ ಭಾರತ ಆಡಳಿತ ಸೇವೆಗಳು, ಭಾರತ ಅರಣ್ಯ ಸೇವೆಗಳು ಮತ್ತು ಭಾರತ ಪೋಲೀಸ್ ಸೇವೆಗಳ ವಿನಿಯಮಗಳು ಅನ್ವಯಿಸುವ ಸೇವಾ ಷರತ್ತುಗಳಿಗೆ ಒಳಪಟ್ಟ ಅಖಿಲ ಭಾರತ ಸೇವೆಗಳಿಗೆ ಸೇರಿದ ಅಧಿಕಾರಿಗಳು. ಆದರೆ ಇದರಲ್ಲಿ ಭಾರತ ಸರ್ಕಾರದಲ್ಲಿ ಪ್ರತಿನಿಯೋಜನೆ ಮೇಲಿರುವ ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಕರಾರು ಆಧಾರದ ಮೇಲೆ ಮುಖ್ಯಮಂತ್ರಿ, ಇತರ ಮಂತ್ರಿಗಳು, ವಿಧಾನಸಭೆಯ ಸಭಾಧ್ಯಕ್ಷರು ಮತ್ತು ಉಪ-ಸಭಾಧ್ಯಾಕ್ಷರು, ವಿಧಾನ ಪರಿಷತ್ತಿನ ಸಭಾಪತಿ ಮತ್ತು ಉಪಸಭಾಪತಿ ಮತ್ತು ಸರ್ಕಾರಿ ಮುಖ್ಯ ಸಚೇತಕರ ವೈಯಕ್ತಿಕ ಕಛೇರಿಗಳಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ನೇಮಕಗೊಂಡವರನ್ನು ಹೊರತುಪಡಿಸಿ, ಕರಾರು ಆಧಾರದ ಮೇಲೆ ನೇಮಕಗೊಂಡವರು ಮತ್ತು ಸರ್ಕಾರದ ಅಡಿಯಲ್ಲಿ ಸೇವೆ ಸಲ್ಲಿಸುವವರು ಸೇರುವುದಿಲ್ಲ;

(ಎಫ್) "ಸರ್ಕಾರ"ಎಂದರೆ ರಾಜ್ಯ ಸರ್ಕಾರ;

(ಜಿ) "ಹಳೇ ನಿಯಮಗಳು "ಎಂದರೆ,-

(i) ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 40 ಪಿವಿಎನ್ 76 ದಿನಾಂಕ 22 ಏಪ್ರಿಲ್ 1976ರ ಮೂಲಕ ಹೊರಡಿಸಲಾದ ಬಾಡಿಗೆ ಗೃಹ ನಿರ್ಮಾಣ ಯೋಜನೆಯ ಮೇರೆಗೆ ಕಟ್ಟಡಲಾದ ಮನೆಗಳ ಹಂಚಿಕೆ ವಿನಿಯಮಗಳು.

(ii) ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 73 ಪಿವಿಎನ್ 79 (II) ದಿನಾಂಕ 15 ಡಿಸೆಂಬರ್ 1983ರ ಮೂಲಕ ಹೊರಡಿಸಲಾದ, ಬೆಂಗಳೂರಿನ ತಿಮ್ಮೇನಹಳ್ಳಿ, ಜಯನಗರ ಮತ್ತು ಯಲಹಂಕ ಬಡಾವಣೆಗಳಲ್ಲಿ ಬಾಡಿಗೆ ಗೃಹನಿರ್ಮಾಣ ಯೋಜನೆಯ ಮೇರೆಗೆ ಕಟ್ಟಡಲಾದ ಮನೆಗಳ ಹಂಚಿಕೆ ನಿಯಮಗಳು; ಮತ್ತು

(iii)ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 269 ಪಿಪಿಎಂ 85 ದಿನಾಂಕ 7 ಆಗಸ್ಟ್ 1986ರ ಮೂಲಕ ಹೊರಡಿಸಲಾದ 1986ರ ಬಾಡಿಗೆ ಗೃಹನಿರ್ಮಾಣ (ಪರಿಷ್ಕೃತ) ನಿಯಮಗಳ ಮೇರೆಗೆ ಬೆಂಗಳೂರಿನ ಜೀವನ ಭೀಮಾನಗರ, ವಸಂತನಗರ ಮತ್ತು ಜಯಮಹಲ್ ಬಡಾವಣೆಗಳ ಸರ್ಕಾರಿ ವಸತಿಗೃಹಗಳ ಹಂಚಿಕೆ ಮತ್ತು ಸರ್ಕಾರಿ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 222 ಪಿಪಿಎಂ 87 ದಿನಾಂಕ 1 ಡಿಸೆಂಬರ್ 1987ರ ಮೇರೆಗಿನ ಜಯನಗರ, ರಾಜಾಜಿನಗರ, ವಿಲ್ಸನ್‌ಗಾರ್ಡನ್, ತಿಮ್ಮೇನಹಳ್ಳಿ ಮತ್ತು ರಾಜಮಹಲ್ ವಿಲಾಸ್ ಬಡಾವಣೆಗಳ ವಸತಿಗೃಹಗಳ ಹಂಚಿಕೆಯ ನಿಯಮಗಳು,

--ಇವುಗಳ ಮೇರೆಗೆ ಹಂಚಿಕೆಯಾದ ಮನೆಗಳ ಸಂಬಂಧದಲ್ಲಿ ಹಂಚಿಕೆ ನಿಯಮಗಳು.

2. ಇದರಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಇತರ ಎಲ್ಲ ಪದಗಳು ಮತ್ತು ಅಭಿವ್ಯಕ್ತಿಗಳು ಕರ್ನಾಟಕ ಸಿವಿಲ್ ಸೇವಾ ನಿಯಮಗಳು ಮತ್ತು ಕರ್ನಾಟಕ ಸಿವಿಲ್ ಸೇವೆಗಳ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥವನ್ನೇ ಹೊಂದಿರತಕ್ಕುದು.

3.ವಸತಿ ಗೃಹಗಳ ವರ್ಗೀಕರಣ.-ಬೆಂಗಳೂರು ನಗರದ ಜೀವನ ಭೀಮಾನಗರ, ವಸಂತನಗರ, ಜಯಮಹಲ್, ರಾಜಾಜಿನಗರ, ವಿಲ್ಸನ್‌ಗಾರ್ಡನ್, ಜಯನಗರ, ತಿಮ್ಮೇನಹಳ್ಳಿ, ಯಲಹಂಕ, ಕೆಂಗೇರಿ, ಕೋರಮಂಗಲ, ಆರ್.ಟಿ.ನಗರ, ನಂದಿನಿ ಲೇಔಟ್, ರಾಜಮಹಲ್ ವಿಲಾಸ್ ಬಡಾವಣೆಗಳಲ್ಲಿ ಹಂಚಿಕೆಗೆ ಲಭ್ಯವಿರುವ ವಸತಿಗೃಹಗಳು. ಅವುಗಳ ಸಂಖ್ಯೆ, ಮಾದರಿ

ಕೋಷ್ಟಕ

| ಕ್ರ ಸಂ | ವಸತಿಗೃಹಗಳ ಸ್ಥಳ ಮತ್ತು ಮಾದರಿ | ಲಭ್ಯವಿರುವ ಒಟ್ಟು ಮನೆಗಳು | ನ್ಯಾಯಿಕ ಅಧಿಕಾರಿಗಳಿಗೆ ಗೊತ್ತು ಮಾಡಲಾದುದು | ಹಂಚಿಕೆಗೆ ಲಭ್ಯವಿರುವ ವಸತಿ ಗೃಹಗಳು |
|---|---|---|---|---|
| 1 | 2 | 3 | 4 | 5 |
| 1. | ಆರ್.ಎಂ.ವಿ. ಬಡಾವಣೆ | 23 | - | 23 |
| 2. | (ಎ)ಜೀವನ ಬೀಮಾನಗರ'ಬಿ' ಮಾದರಿ | 54 | - | 54 |
| | (ಬಿ)ವಸಂತ ನಗರ 'ಎ ' ಮಾದರಿ | 59 | 2 | 57 |
| 3. | (ಎ) ಜೀವನಬೀಮಾ ನಗರ 'ಸಿ'ಮಾದರಿ | 115 | - | 115 |
| | (ಬಿ) ಜಯಮಹಲ್ 'ಸಿ'ಮಾದರಿ | 29 | - | 29 |
| 4. | (ಎ)ಜೀವನಬೀಮಾನಗರ 'ಎ'ಮಾದರಿ ನೆಲಮಹಡಿ (ಬಿ)ಜೀವನಬೀಮಾನಗರ 'ಎ'ಮಾದರಿ ಮೊದಲನೇ ಮಹಡಿ (ಸಿ) ಜೀವನಬೀಮಾನಗರ 'ಎ'ಮಾದರಿ ಎರಡನೇ ಮಹಡಿ | 426 | - | 426 |
| 5. | ಜಯಮಹಲ್ 'ಡಿ' ಮಾದರಿ | 22 | - | 22 |
| | ನಂದಿನಿ ಲೇಔಟ್ ಎಂಐಜಿ ವಸತಿಗೃಹಗಳು | 52 | - | 52 |
| 6. | ಕಾವಲಭೈರಸಂದ್ರ(ಆರ್.ಟಿ. ನಗರದಲ್ಲಿರುವುದು)(ಎ ಮತ್ತು ಬಿ ಸಮೂಹ) | 85 | - | 85 |
| 7. | ಕಾವಲಭೈರಸಂದ್ರ ಡ್ಯುಪ್ಲೆಕ್ಸ್ ಮಾದರಿ | 112 | - | 112 |
| 8. | ಕೋರಮಂಗಲ | 595 | 135 | 460 |
| 9. | ವಾಸದ ಘಟಕಗಳು | | | |

| 1 | 2 | 3 | 4 | 5 |
|---|---|---|---|---|
| | (ಕರ್ನಾಟಕ ಸರ್ಕಾರದ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ಸಿ ಮತ್ತು ಡಿ ಗುಂಪಿನ ನೌಕರರಿಗೆ ಮೀಸಲಿಡಲಾಗಿರುವುದು) | | | |
| | (ಎ) ಜಯನಗರ | 9 | - | 9 |
| | (ಬಿ) ಯಲಹಂಕ | 62 | - | 62 |
| | (ಸಿ) ತಿಮ್ಮೇನಹಳ್ಳಿ | 54 | - | 54 |
| | ವಾಸದ ಘಟಕಗಳು (ಕರ್ನಾಟಕ ಸರ್ಕಾರದ ಸಚಿವಾಲಯವನ್ನು ಹೊರತುಪಡಿಸಿ ಬೆಂಗಳೂರಿನ ಇತರ ಎಲ್ಲಾ ಸರ್ಕಾರಿ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಸಿ ಮತ್ತು ಡಿ ಗುಂಪಿನ ನೌಕರರಿಗೆ ಹಂಚಿಕೆಗಾಗಿ ಮೀಸಲಿಡಲಾಗಿರುವುದು. | | | |
| | (ಎ) ರಾಜಾಜಿನಗರ | 216 | - | 216 |
| | (ಬಿ) ವಿಲ್ಸನ್‌ಗಾರ್ಡನ್ | 288 | - | 288 |
| | (ಸಿ) ಜಯನಗರ | 9 | - | 9 |
| | (ಡಿ) ಯಲಹಂಕ | 60 | - | 60 |
| | (ಇ) ಕಾವಲಭೈರಸಂದ್ರ | 152 | - | 152 |
| | (ಎಫ್)ನಂದಿನಿ ಲೇಔಟ್ (ಎಲ್‌ಐಜಿ ವಸತಿಗೃಹಗಳು) | 132 | - | 132 |
| | ಒಟ್ಟು | 2,691 | 137 | 2,554 |

ಪರಂತು, ಸರ್ಕಾರದ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಎ,ಬಿ,ಸಿ, ಮತ್ತು ಡಿ ಮಾದರಿಯ 50 ಕ್ಕಿಂತ ಹೆಚ್ಚಿಲ್ಲದ ವಸತಿ ಗೃಹಗಳನ್ನು ಕರ್ನಾಟಕ ವಿಧಾನ ಮಂಡಲ ಸಚಿವಾಲಯದ ಅಧಿಕಾರಿಗಳು ಮತ್ತು ನೌಕರರಿಗೆ ಹಂಚಿಕೆ ಮಾಡಲು ಮೀಸಲಾಗಿರಿಸತಕ್ಕದ್ದು.

4. **ಹಂಚಿಕೆಯ ಹಕ್ಕು.**-ಜೀವನಬೀಮಾನಗರ, ವಸಂತನಗರ, ಜಯಮಹಲ್, ರಾಜಾಜಿನಗರ, ವಿಲ್ಸನ್‌ಗಾರ್ಡನ್, ಜಯನಗರ, ತಿಮ್ಮೇನಹಳ್ಳಿ, ಯಲಹಂಕ ಬಡಾವಣೆ, ಕೆಂಗೇರಿ, ಆರ್.ಟಿ.ನಗರ, ರಾಜಮಹಲ್ ವಿಲಾಸ್ ಬಡಾವಣೆ, ನಂದಿನಿ ಲೇಔಟ್ ಮತ್ತು ಕೋರಮಂಗಲ ಬಡಾವಣೆಗಳಲ್ಲಿನ ಸರ್ಕಾರಿ ಮನೆಗಳು:ವಸತಿ ಗೃಹಗಳನ್ನು ಈ ಕೆಳಗೆ ಕೊಟ್ಟಿರುವ ವರ್ಗೀಕರಣದ

| | |
|---|---|
| (ಎ) ರೂ. 10,360-00 ಮತ್ತು ಅದಕ್ಕಿಂತ ಹೆಚ್ಚು ಮೂಲವೇತನ ಪಡೆವ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಕರ್ನಾಟಕ ಕೇಡರ್‌ನಲ್ಲಿರುವ ಅಖಿಲ ಭಾರತ ಸೇವೆಗಳ ಅಧಿಕಾರಿಗಳು. | ಜೀವನಬೀಮಾನಗರದಲ್ಲಿ 'ಬಿ'ಮಾದರಿ ವಸಂತನಗರ, ಆರ್.ಎಂ.ವಿ.ಬಡಾವಣೆ, ಆರ್.ಟಿ.ನಗರದಲ್ಲಿ 'ಸಿ'ಮಾದರಿ ನಂದಿನಿ ಲೇಔಟ್ ಮತ್ತು ಕೋರಮಂಗಲದಲ್ಲಿ ಎಂಐಜಿ ವಸತಿ ಗೃಹಗಳು ಹಾಗೂ ಡ್ಯೂಪ್ಲೆಕ್ಸ್ ಮನೆಗಳು. |
| (ಬಿ) ರೂ.10,360-00 ಕ್ಕಿಂತ ಕಡಿಮೆ ಮೂಲ ವೇತನ ಪಡೆಯುತ್ತಿರುವ ಸರ್ಕಾರದ'ಎ'ಗಂಪಿನ ಅಧಿಕಾರಿಗಳು. | ಜೀವನಬೀಮಾನಗರದಲ್ಲಿನ 'ಸಿ' ಮಾದರಿ ಮತ್ತು ಕೋರಮಂಗಲ ಮತ್ತು ಜಯಮಹಲ್ ಬಡಾವಣೆಗಳಲ್ಲಿನ 'ಸಿ'ಮಾದರಿ.<br>'ಎ' ಗುಂಪಿನ ಅಧಿಕಾರಿಗಳಿಗೆ ಮೂರು ಮಲಗುವ ಕೋಣೆಗಳುಳ್ಳ ವಸತಿ ಗೃಹಗಳು ಮತ್ತು 'ಬಿ'ಗುಂಪಿನ ಅಧಿಕಾರಿಗಳಿಗೆ ಎರಡು ಮಲಗುವ ಕೋಣೆಗಳುಳ್ಳ ವಸತಿ ಗೃಹಗಳು. |
| (ಸಿ)'ಬಿ'ಗುಂಪಿನ ಅಧಿಕಾರಿಗಳು | ಜೀವನಬೀಮಾನಗರದಲ್ಲಿನ 'ಡಿ'ಮಾದರಿಯ ಮತ್ತು ನಂದಿನ ಬಡಾವಣೆಯಲ್ಲಿನ ಎಲ್‌ಐಜಿ ವಸತಿ ಗೃಹಗಳು. |
| (ಡಿ)'ಸಿ'ಗುಂಪಿನ ನೌಕರರು | ಜೀವನಬೀಮಾನಗರದಲ್ಲಿನ 'ಎ'ಮಾದರಿಯ ನೆಲಮಹಡಿ ಮತ್ತು ಜಯಮಹಲ್ ಬಡಾವಣೆಗಳಲ್ಲಿನ 'ಡಿ'ಮಾದರಿ. |
| (1) ರೂ. 4150-00ಮತ್ತು ಅದಕ್ಕಿಂತ ಹೆಚ್ಚಿನ ಆದರೆ ರೂ. 5575-00ಕ್ಕಿಂತ ಕಡಿಮೆ ವೇತನ ಪಡೆಯುವವರು. | ಜೀವನಬೀಮಾನಗರದಲ್ಲಿ'ಎ'ಮಾದರಿಯ ಮೊದಲ ಮಹಡಿ. |
| (2)ರೂ. 4150 ಕ್ಕಿಂತ ಕಡಿಮೆ ಮೂಲವೇತನ ಪಡೆಯುವವರು | ಜೀವನ ಬೀಮಾನಗರ, ರಾಜಾಜಿನಗರ 'ಎ' ಮಾದರಿಯ ಎರಡನೇ ಮಹಡಿ. |
| (ಇ)'ಸಿ'ಮತ್ತು 'ಡಿ' ಗುಂಪಿನ ನೌಕರರು(ಅವರು ಎಷ್ಟೇ ವೇತನವನ್ನು ಪಡೆಯುತ್ತಿರಲಿ), | ವಿಲ್ಸನ್‌ಗಾರ್ಡನ್, ಜಯನಗರ, ತಿಮ್ಮೇನಹಳ್ಳಿ, ಯಲಹಂಕ ಮತ್ತು ಕೆಂಗೇರಿ. |

**5.ಹಂಚಿಕೆ ಪಡೆಯಲು ಅರ್ಹತೆ.**-(1) ಬೆಂಗಳೂರಿನಲ್ಲಿ ಸೇವೆಯಲ್ಲಿರುವ ಸರ್ಕಾರಿ ನೌಕರರು ಕತಮ್ಮ ಹೆಸರಿನಲ್ಲಿ ಅಥವಾ ತಮ್ಮ ಕುಟುಂಬದ ಸದಸ್ಯನ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ವಂತ ಮನೆಯನ್ನು ಹೊಂದಿಲ್ಲದಿದ್ದರೆ, ಅಂತಹವರು ಈ ಸಂಬಂಧದಲ್ಲಿ ಹಾಗೆಂದು ಶಪಥ ಮಾಡಿದ ಒಂದು ಅಫಿಡವಿಟ್ಟನ್ನು ದಾಖಲು ಮಾಡಬೇಕೆಂಬುದಕ್ಕೆ ಒಳಪಟ್ಟು ಮತ್ತು 8ನೇ ನಿಯಮದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಸರ್ಕಾರಿ ಮನೆಗಳು: ವಸತಿಗೃಹಗಳ ಹಂಚಿಕೆಗೆ ಅರ್ಹರಾಗಿರತಕ್ಕದ್ದು.

(2) ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತ ಸರ್ಕಾರದ ಸೇವೆಯ ಅಧಿಕಾರಿಗಳು:ನೌಕರರರು ಮತ್ತು ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತ ಸರ್ಕಾರ ಮತ್ತು ಇತರೆ ರಾಜ್ಯ ಸರ್ಕಾರದ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿನ ಅಧಿಕಾರಿಗಳು ಸರ್ಕಾರದ ಮನೆಗಳ:ವಸತಿಗಳ ಹಂಚಿಕೆ ಪಡೆಯಲು ಅರ್ಹರಾಗಿರತಕ್ಕದ್ದಲ್ಲ.

(3) 'ಎ'ಗುಂಪಿನ ಅಧಿಕಾರಿಗಳು, ಸರ್ಕಾರಿ ವಸತಿ ಗೃಹದ ಹಂಚಿಕೆಗಾಗಿ ಅರ್ಜಿಯನ್ನು ವಾಸ್ತವವಾಗಿ ಅಧಿಕಾರಿಯು ಬೆಂಗಳೂರಿನಲ್ಲಿ ಕರ್ತವ್ಯಕ್ಕೆ ಹಾಜರಾದ ತರುವಾಯ ಈ ನಿಯ.ಮಗಳಿಗೆ ಲಗತ್ತಿಸಲಾದ ನಮೂನೆ-1 ರಲ್ಲಿ ಒಂದು ಅಫಿಡವಿಟ್ಟಿನೊಂದಿಗೆ ಮತ್ತು ಅವಶ್ಯಕ ಪ್ರಮಾಣ ಪತ್ರ ಮತ್ತು ಘೋಷಣೆಯೊಂದಿಗೆ ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕುದು.

(4) 'ಬಿ', 'ಸಿ'ಮತ್ತು'ಡಿ' ಗುಂಪಿನ ಅಧಿಕಾರಿಗಳು:ನೌಕರರು ಸರ್ಕಾರದ ವಸತಿ ಗೃಸಗಳ ಹಂಚಿಕೆಗಾಗಿ ಅರ್ಜಿಯನ್ನು ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ-II ರಲ್ಲಿ ಒಂದು ಅಫಿಡವಿಟ್ಟು ಮತ್ತು ಮೇಲಿನ (3) ನೇ ಉಪ-ನಿಯಮದಲ್ಲಿರುವಂತೆ ಅಗತ್ಯ ಪ್ರಮಾಣ ಪತ್ರ ಮತ್ತು ಘೋಷಣಾ ಪತ್ರಗಳೊಂದಿಗೆ, ವಿಭಾಗೀಯ ಕಮೀಷನರ್, ಬೆಂಗಳೂರು ವಿಭಾಗ, ಬೆಂಗಳೂರು, ಇವರಿಗೆ ಸಲ್ಲಿಸತಕ್ಕದ್ದು.

(5) ಅರ್ಹ ಅರ್ಜಿದಾರರ ಹೆಸರುಗಳನ್ನು, ಅರ್ಜಿಯಲ್ಲಿರುವ ಎಲ್ಲ ವಿವರಗಳು ಮತ್ತು ಅಫಿಡವಿಟ್ಟನ್ನು ಪರಿಶೀಲನೆ ಮಾಡಿದ ತರುವಾಯ ಲೋಕೋಪಯೋಗಿ ಸಚಿವಾಲಯ:ವಿಭಾಗೀಯ ಕಮೀಷನರ್‌ರವರ ಕಛೇರಿಯಲ್ಲಿ ಈ ಉದ್ದೇಶಕ್ಕಾಗಿ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದಿಸತಕ್ಕುದು.

(6) ವಸತಿ ಗೃಹಗಳ ಹಂಚಿಕೆಗಾಗಿ ಜೇಷ್ಠತೆಯನ್ನು ನೋಂದಾಯಿಸಿದ ದಿನಾಂಕದ ಆಧಾರದ ಮೇಲೆ ಪರಿಗಣಿಸತಕ್ಕುದು.

ಪರಂತು, ಒಂದೇ ದಿನದಂದು ವಸತಿ ಗೃಹದ ಹಂಚಿಕೆಗಾಗಿ ಒಂದಕ್ಕಿಂತ ಹೆಚ್ಚಿನ ಅರ್ಜಿದಾರರು ನೋಂದಣಿ ಮಾಡಿದ್ದರೆ ಅವರು ನಡುವಿನ ಜೇಷ್ಟತೆಯನ್ನು ಬೆಂಗಳೂರಿನಲ್ಲಿ ಅವರು ಸಲ್ಲಿಸಿದ ನಿರಂತರ ಸೇವೆಯನ್ನು ಪರಿಗಣನೆಗೆ ತೆಗೆದುಕೊಂಡು ನಿರ್ಧರಿಸತಕ್ಕುದು ಮತ್ತು ಬೆಂಗಳೂರಿನಲ್ಲಿ ಹೆಚ್ಚಿನ ಸೇವೆ ಸಲ್ಲಿಸಿದಂಥ ಅರ್ಜಿದಾರನನ್ನು ಕಡಿಮೆ ಸೇವೆ ಸಲ್ಲಿಸಿದ ವ್ಯಕ್ತಿಗಿಂತ ಮೇಲೆ ಇಡಲಾಗುವುದು.

(7) ಪ್ರತಿಯೊಂದು ಪ್ರವರ್ಗಕ್ಕೂ ಅನ್ವಯಿಸುವಂತ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು 4 ನೇ ನಿಯಮದಲ್ಲಿ ಹೇಳಲಾದಂತೆ ಸರ್ಕಾರಿ ನೌಕರರ ಪ್ರತಿಯೊಂದು ಗುಂಪಿನ ಸಂಬಂಧದಲ್ಲಿಯೂ ನಿರ್ವಹಿಸತಕ್ಕುದು.

(8) ಸರ್ಕಾರಿ ವಸತಿ ಗೃಹದ ಹಂಚಿಕೆಗಾಗಿ ಅರ್ಜಿಯನ್ನು ನೋಂದಾಯಿಸುವಂತಹ ಅರ್ಜಿದಾರನು, ಬೆಂಗಳೂರಿನಿಂದ ಹೊರಗೆ ಅವನಿಗೆ ವರ್ಗಾವಣೆಯಾದಲ್ಲಿ ಅಥವಾ ಅವನ ಕುಟುಂಬದ ಸದಸ್ಯರು ಅಥವಾ ಅವನು ಮನೆಯನ್ನು ಅರ್ಜಿಸಿದಲ್ಲಿ ಮಂಜೂರಾತಿಯ ಹಕ್ಕನ್ನು ತನ್ನಷ್ಟಕ್ಕೆ ತಾನೇ ಕಳೆದುಕೊಳ್ಳತಕ್ಕುದು. ಮತ್ತು ಅವನು ಪದಮುಕ್ತನಾದ ಅಥವಾ ಹಾಗೆ ಮನೆಯನ್ನು ಅರ್ಜಿಸಿದ ದಿನಾಂಕದಿಂದ (1ನೇ ನಿಯಮದಲ್ಲಿ ನಿರೂಪಿತವಾದಂತೆ) ಅವನ ನೋಂದಣಿ ರದ್ದುಗೊಳ್ಳತಕ್ಕುದು. ಅಂತಹ ಅರ್ಜಿದಾರರು ಅವರ ವರ್ಗಾವಣೆಯ ವಿಷಯವನ್ನು ಕೂಡಲೇ

(2) ಜೀವನ ಬೀಮಾನಗರ ಮತ್ತು ಜಯಮಹಲ್‌ನಲ್ಲಿರುವ 'ಎ' ಮಾದರಿ ಸರ್ಕಾ[ರಿ] ವಸತಿ ಗೃಹಗಳನ್ನು ಮತ್ತು ರಾಜಾಜಿನಗರ, ವಿಲ್ಸನ್‌ಗಾರ್ಡನ್, ತಿಮ್ಮೇನಹಳ್ಳಿ, ಜಯನಗ[ರ] ನಂದಿನಿ ಬಡಾವಣೆ, ಕೋರಮಂಗಲ, ಆರ್.ಟಿ.ನಗರ ಮತ್ತು ಯಲಹಂಕಗಳಲ್ಲಿರುವ ವಸ[ತಿ] ಗೃಹಗಳನ್ನು

(ಎ) 'ಬಿ' ಗುಂಪಿನ ನೌಕರರಿಗೆ ಈ ಮುಂದಿನವರನ್ನು ಒಳಗೊಂಡ ಸಮಿತಿಯು ಹಂಚಿ[ಕೆ] ಮಾಡತಕ್ಕುದು.

(i) ವಿಭಾಗೀಯ ಕಮೀಷನರ್, ಬೆಂಗಳೂರು ವಿಭಾಗ, ಬೆಂಗಳೂರು. — ಅಧ್ಯಕ್ಷರು

(ii) ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು — ಸದಸ್ಯರು

(iii) ಸರ್ಕಾರದ ಉಪ ಕಾರ್ಯದರ್ಶಿ:ಜಂಟಿ ಕಾರ್ಯದರ್ಶಿ ಹೆಚ್ಚುವರಿ ಕಾರ್ಯದರ್ಶಿ ಸಿಆಸುಇ(ಆಡಳಿತ) — ಸದಸ್ಯರು

(iv) ಸೂಪರಿಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಕಟ್ಟಡಗಳ ವೃತ್ತ, ಬೆಂಗಳೂರು. — ಸದಸ್ಯ-ಕಾರ್ಯದರ್ಶಿ

(ಬಿ) ಸಿ ಮತ್ತು ಡಿ ಗುಂಪಿನ ನೌಕರರಿಗೆ ಈ ಮುಂದಿನವರನ್ನು ಒಳಗೊಂಡ ಸಮಿತಿಯ ಹಂಚಿಕೆ ಮಾಡತಕ್ಕುದು,-

(i) ವಿಭಾಗೀಯ ಕಮೀಷನರ್, ಬೆಂಗಳೂರು ವಿಭಾಗ ಬೇಂಗಳೂರು. — ಅಧ್ಯಕ್ಷರು

(ii) ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು — ಸದಸ್ಯರು

(iii) ರಾಜ್ಯ ಸರ್ಕಾರಿ ನೌಕರರ ಸಂಘದ ಪ್ರತಿನಿಧಿ — ಸದಸ್ಯರು

(iv) ಸೂಪರಿ ಟೆಂಡಿಂಗ್ ಇಂಜಿನಿಯರ್, ಲೋಕೋಪಯೋಗಿ ಕಟ್ಟಡಗಳ ವೃತ್ತ, ಬೆಂಗಳೂರು. — ಸದಸ್ಯ-ಕಾರ್ಯದರ್ಶಿ.

(3) ಸರ್ಕಾರಿ ಮನೆಗಳ: ವಸತಿಗಳ ಹಂಚಿಕೆಯನ್ನು ಕಟ್ಟುನಿಟ್ಟಾಗಿ ಅರ್ಹತೆಯ ದಿನಾಂಕಗ[ಳ] ಆಧಾರದ ಮೇಲೆ ಮಾಡತಕ್ಕುದು. ಅರ್ಹತೆಯ ದಿನಾಂಕವು, ಸಂಬಂಧಪಟ್ಟ ಪ್ರಾಧಿಕಾರಿಗಳು [ಈ] ಉದ್ದೇಶಕ್ಕಾಗಿ ನಿರ್ವಹಿಸುತ್ತಿರುವ ರಿಜಿಸ್ಟರ್‌ನಲ್ಲಿ ನಮೂದಾಗಿರುವ ಆತನ ಜೇಷ್ಠತೆಯ ಆಧಾರದಿಂದ ಸರ್ಕಾರಿ ಮನೆಗಳ:ವಸತಿಗೃಹಗಳ ಹಂಚಿಕೆ ಪಡೆಯಲು ಆ ಅಧಿಕಾರಿ:ನೌಕರ[ನು] ಅರ್ಹನಾಗುವ ದಿನಾಂಕವಾಗಿ[ರತ]ಕ್ಕುದು.

(4) ಹಂಚಿಕೆ ಆದೇಶವು, ಹಂಚಿಕೆದಾರನು,-

(ಎ) ಹಂಚಿಕೆ ಆದೇಶ ಏಳು ದಿನಗೊಳಗಾಗಿ ಠೇವಣಿ ಮೊತ್ತವನ್ನು ಸಂದಾ[ಯ] ಮಾಡಲು ವಿಫಲನಾದರೆ

(ಬಿ) ಹಂಚಿಕೆ ಆದೇಶದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಆವನಿ[ಗೆ] ಹಂಚಿಕೆಯಾದ ವಸತಿ ಗೃಹವನ್ನು ಸ್ವಾಧೀನಪಡಿಸಿಕೊಳ್ಳಲು ವಿಫಲನಾದರೆ,

-ರದ್ದುಗೊಳ್ಳತಕ್ಕುದು.

ಅಥವಾ ಸ್ವಂತ ಮನೆಯನ್ನು ಆರ್ಜಿಸಿದ ತರುವಾಯ ಸಂದರ್ಭಾನುಸಾರ. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ:ವಿಭಾಗೀಯ ಕಮೀಷನರ್‌ರವರಿಗೆ ತಿಳಿಸತಕ್ಕದ್ದು ಮತ್ತು ಅವರ ನೋಂದಣಿಯನ್ನು ರದ್ದುಗೊಳಿಸುವಂತೆ ಕೋರತಕ್ಕದ್ದು.

(9) ಹಳೆಯ ನಿಯಮಗಳ ಮೇರೆಗೆ ಈಗಾಗಲೇ ಸರ್ಕಾರಿ ವಸತಿ ಗೃಹದ ಹಂಚಿಕೆ ಪಡೆದು ವಾಸಿಸುತ್ತಿರುವ ಮತ್ತು ಬೆಂಗಳೂರಿನಲ್ಲಿ ಸತತವಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ಅವನ ಸ್ವಂತ ಹೆಸರಿನಲ್ಲಿ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯರ ಹೆಸರಿನಲ್ಲಿ ಬೆಂಗಳೂರಿನಲ್ಲಿ ಸ್ವಂತ ಮನೆಯನ್ನು ಹೊಂದಿರದ ಸರ್ಕಾರಿ ನೌಕರನಿಗೆ (10)ನೇ ಉಪ-ನಿಯಮದ ಮೇರೆಗೆ ಅಂತಹ ವಸತಿ ಗೃಹದಲ್ಲಿ ವಾಸಿಸುವುದನ್ನು ಮುಂದುವರಿಸಲು ಅನುಮತಿಯನ್ನು ನೀಡತಕ್ಕುದು.

(10) ಈ ನಿಯಮದಲ್ಲಿ ಏನೇ ಇದ್ದರೂ, ಸರ್ಕಾರಿ ವಸತಿ ಗೃಹದ ಹಂಚಿಕೆ ಪಡೆದಿರುವವನಿಗೆ ಈ ಕೆಳಗೆ ನಿರ್ದಿಷ್ಟಪಡಿಸಿದ ಗರಿಷ್ಠ ಅವಧಿಯವರೆಗೆ, ನಡುವೆ ಯಾವುದೇ ಕಾರಣಗಳಿಗಾಗಿ ಹಂಚಿಕೆ ರದ್ದುಗೊಂಡ ಹೊರತು, ವಾಸಿಸಲು ಅನುಮತಿಸತಕ್ಕುದು.

(1) ಎ ಮತ್ತು ಬಿ ಗುಂಪಿನ ಅಧಿಕಾರಿಗಳು- ಹಂಚಿಕೆ ಮಾಡಿದ ದಿನಾಂಕದಿಂದ ಐದು ವರ್ಷಗಳು.

(2) ಸಿ ಮತ್ತು ಡಿ ಗುಂಪಿನ ನೌಕರರರು- ಹಂಚಿಕೆ ಮಾಡಿದ ದಿನಾಂಕದಿಂದ ಎಂಟು ವರ್ಷಗಳು.

ಪರಂತು, (9)ನೇ ಉಪ-ನಿಯಮದಲ್ಲಿ ಉಲ್ಲೇಖಿಸಿರುವ ಸರ್ಕಾರಿ ನೌಕರನ ಸಂಬಂಧದಲ್ಲಿ ಹಳೆಯ ನಿಯಮಗಳ ಮೇರೆಗೆ ಅವನಿಗೆ ಹಂಚಿಕೆಯಾದ ವಸತಿ ಗೃಹದಲ್ಲಿ ಈಗಾಗಲೇ ಅವನು ವಾಸವಿದ್ದರೆ, ಈ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿದ ಗರಿಷ್ಠ ಅವಧಿಯನ್ನು ಈ ನಿಯಮಗಳು ಪ್ರಾರಂಭವಾದ ದಿನಾಂಕದಿಂದ ಲೆಕ್ಕ ಹಾಕತಕ್ಕುದು.

**6. ಹಂಚಿಕೆ ಸಮಿತಿಗಳು.**-(1) ಬೆಂಗಳೂರಿನ ಜೀವನ ಬೀಮಾನಗರ, ಜಯಮಹಲ್ ಬಡಾವಣೆ, ಆರ್.ಟಿ.ನಗರ, ನಂದಿನಿ ಬಡಾವಣೆ, ಆರ್.ಎಂ.ವಿ.ಬಡಾವಣೆ ಮತ್ತು ಕೋರಮಂಗಲಗಳಲ್ಲಿ 'ಎ' ಗುಂಪಿನ ಅಧಿಕಾರಿಗಳಿಗಾಗಿ ಇರುವ 'ಬಿ' ಮತ್ತು 'ಸಿ' ಮಾದರಿಯ ಸರ್ಕಾರಿ ವಸತಿ ಗೃಹಗಳ ಹಂಚಿಕೆಯನ್ನು ಈ ಮುಂದಿನವರನ್ನೊಳಗೊಂಡ ಸಮಿತಿಯು ಮಾಡತಕ್ಕುದು.

| | |
|---|---|
| (i)ಸರ್ಕಾರದ ಕಾರ್ಯದರ್ಶಿಗಳು ಲೋಕೋಪಯೋಗಿ ಇಲಾಖೆ | ಅಧ್ಯಕ್ಷರು |
| (ii) ಸರ್ಕಾರದ ಉಪ-ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿ, ಸಿಆಸುಇ (ಸೇವೆಗಳು) | ಸದಸ್ಯರು |
| (iii) ಸರ್ಕಾರದ ಉಪ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿ ಹಣಕಾಸು ಇಲಾಖೆ(ಸೇವೆಗಳು) | ಸದಸ್ಯರು |
| (iv)ಸರ್ಕಾರದ ಉಪ ಕಾರ್ಯದರ್ಶಿ ಅಥವಾ ಜಂಟಿ ಕಾರ್ಯದರ್ಶಿ ಅಥವಾ ಹೆಚ್ಚುವರಿ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ (ಸೇವೆಗಳು). | ಸದಸ್ಯ ಕಾರ್ಯದರ್ಶಿ |

(5) ಮೇಲ್ಕಂಡಂತೆ ವಸತಿ ಗೃಹಗಳ ಹಂಚಿಕೆಗೆ ಸಂಬಂಧಪಟ್ಟ ಆದೇಶಗಳನ್ನು ಹೊರಡಿಸುವಾಗ ಸಂಬಂಧಪಟ್ಟ ಪ್ರಾಧಿಕಾರಿಗಳು, ಪ್ರತಿ ತಿಂಗಳು ಹಂಚಿಕೆ ಪಡೆದವನ ವೇತನದಲ್ಲಿ ಬಾಡಿಗೆ:ದಂಡ ಬಾಡಿಗೆಯನ್ನು ಕಡಿತ ಮಾಡುವುದು ಸಾಧ್ಯವಾಗುವಂತೆ ಮಾಡಲು ಅಕೌಂಟೆಂಟ್ ಜನರಲ್, ಕರ್ನಾಟಕ, ಬೆಂಗಳೂರು -ಇವರಿಗೆ ಮತ್ತು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸಹ ಒಂದು ಪ್ರತಿಯನ್ನು ಕಳುಹಿಸತಕ್ಕುದು.

(6) ಹಂಚಿಕೆ ಪಡೆದವನು, ಪ್ರತಿ ಹಣಕಾಸು ವರ್ಷದ ಆರಂಭದಲ್ಲಿ ಉಪನಗರಗಳೂ ಸೇರಿದಂತೆ ಬೆಂಗಳೂರುನಲ್ಲಿ ಯಾವುದೇ ರೀತಿಯ ಮನೆಯನ್ನು ಆರ್ಜಿಸಿಲ್ಲವೆಂದು ಒಂದು ಘೋಷಣೆಯನ್ನು ಒದಗಿಸತಕ್ಕುದು.

**7. ಸರ್ಕಾರಿ ವಸತಿ ಗೃಹಗಳ ಹಂಚಿಕೆಯಲ್ಲಿ ಮೀಸಲಾತಿ ಅವಕಾಶ-**

(1) ವಸತಿ ಗೃಹಗಳ ಪ್ರತಿ ಪ್ರವರ್ಗದಲ್ಲಿ ಈ ಮುಂದಿನಂತೆ ಮೀಸಲಾತಿ ಇರತಕ್ಕದ್ದು.

(i) ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ಅಧಿಕಾರಿಗಳು ಮತ್ತು ನೌಕರರಿಗೆ ಹಂಚಿಕೆ ಮಾಡಲು ಶೇಕಡಾ ಇಪ್ಪತ್ತರಷ್ಟು;

(ii)ಅಂಗವಿಕಲ ಅಧಿಕಾರಿಗಳು ಮತ್ತು ನೌಕರರಿಗೆ ಹಂಚಿಕೆ ಮಾಡಲು ಶೇಕಡಾ ಎರಡರಷ್ಟು

ಈ ಉದ್ದೇಶಕ್ಕಾಗಿ ಅನುಸೂಚಿತ ಜಾತಿ, ಅನುಸೂಚಿತ ಪಂಗಡ ಮತ್ತು ಅಂಗವಿಕಲ ಪ್ರವರ್ಗಗಳಿಗೆ ಸೇರಿದ ಅರ್ಜಿದಾರರ ಒಂದು ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ನಿರ್ವಹಿಸಿತಕ್ಕುದು.

ಪರಂತು, ಅವಿವಾಹಿತ ಅಥವಾ ವಿಧವೆ ಮಹಿಳಾ ನೌಕರರಿಗಾಗಿ ಆ ಉದ್ದೇಶಕ್ಕಾಗಿ ನಿರ್ವಹಿಸಲಾದ ಪ್ರತ್ಯೇಕ ಜೇಷ್ಠತೆಯ ಆಧಾರದ ಮೇಲೆ ಪ್ರತಿಯೊಂದು ವರ್ಗದಲ್ಲಿ ಶೇ. ಐವರಷ್ಟು ವಸತಿ ಗೃಹಗಳನ್ನು ಮೀಸಲಿರಿಸತಕ್ಕುದು.

(2) ರಾಜ್ಯದ ಹೊರಗಡೆಯಿಂದ ಅಥವಾ ರಾಜ್ಯದ ಇತರ ಪ್ರದೇಶಗಳಿಂದ ಪ್ರತಿನಿಯೋಜನೆಯಿಂದ ಅಥವಾ ವರ್ಗಾವಣೆಯಾಗಿ ಬೆಂಗಳೂರಿಗೆ ಬಂದಿರುಗುವ ಒಬ್ಬ ಸರ್ಕಾರಿ ನೌಕರನು ಬೆಂಗಳೂರಿನಲ್ಲಿ ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಒಬ್ಬ ಸದಸ್ಯನ ಹೆಸರಿನಲ್ಲಿ ಸ್ವಂತ ಮನೆಯನ್ನು ಹೊಂದಿರದಿದ್ದರೆ ಅವನು ಅಧಿಕಾರ ಅವಧಿಯ ಆಧಾರದ ಮೇಲೆ ವಸತಿ ಗೃಹದ ಹಂಚಿಕೆಗೆ ಹಕ್ಕುಳ್ಳವನಾಗತಕ್ಕುದು. ಹಂಚಿಕೆಯ ಉದ್ದೇಶಕ್ಕಾಗಿ, ಪ್ರತಿನಿಯೋಜನೆಯಿಂದ ಅಥವಾ ವರ್ಗಾವಣೆಯಾಗಿ ಬೆಂಗಳೂರಿಗೆ ಬಂತಿರುಗುವಂತಹ ಸರ್ಕಾರಿ ನೌಕರರ ಸಂಯುಕ್ತ ಪಟ್ಟಿಯನ್ನು ನಿರ್ವಹಿಸತಕ್ಕುದು ಮತ್ತು ಹಂಚಿಕೆಯನ್ನು ಮಾಡುವಾಗ, ಬೆಂಗಳೂರಿನಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಇತರ ಸರ್ಕಾರಿ ನೌಕರರಿಗಿಂತ ಮೇಲಿನ ಆದ್ಯತೆಯನ್ನು ಪಡೆಯತಕ್ಕುದು. ಸರ್ಕಾರವು ಈ ಉಪ-ನಿಯಮದ ಅಡಿಯಲ್ಲಿ ಹಂಚಿಕೆಯ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚಿನ ಪ್ರವರ್ಗಗಳಲ್ಲಿ ಅಂಥ ಸಂಖ್ಯೆಯ ವಸತಿ ಗೃಹಗಳನ್ನು ಕಾಲಕಾಲಕ್ಕೆ ಮೀಸಲಿರಿಸತಕ್ಕುದು.

(3) ರಾಜ್ಯದ ಹೊರಗಡೆಯಿಂದ ಪ್ರತಿನಿಯೋಜನೆಯಿಂದ ವರ್ಗಾವಣೆಯಾಗಿ. ಬೆಂಗಳೂರಿಗೆ ಬಂದಿರುಗುವ, ಆದರೆ ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಯಾವೊಬ್ಬ ಸದಸ್ಯನ ಹೆಸರಿನಲ್ಲಿ ಬೆಂಗಳೂರಿನಲ್ಲಿ ಮನೆಯನ್ನು ಹೊಂದಿರುವ ಸರ್ಕಾರಿ ನೌಕರನಿಗೆ ತಾತ್ಕಾಲಿಕ ಸ್ಥಳಾವಕಾಶವನ್ನು ನೀಡಬಹುದು. ಅಂತಹ ತಾತ್ಕಾಲಿಕ ಸ್ಥಳಾವಕಾಶದ ಹಂಚಿಕೆ ಪಡೆದವನು ತನ್ನ ಸ್ವಂತ ಮನೆಯನ್ನು ಬಾಡಿಗೆಗೆ ನೀಡುವ ಮೂಲಕ ಅವನು ಪಡೆಯುವ ವಾಸ್ತವಿಕ ಬಾಡಿಗೆಗೆ

ಸಮನಾದಷ್ಟು ಲೈಸೆನ್ಸು ಶುಲ್ಕವನ್ನು ಸಂದಾಯ ಮಾಡತಕ್ಕುದು ಮತ್ತು ಅವನಿಗೆ ಆರು ತಿಂಗಳಿಗಿಂತಲೂ ಹೆಚ್ಚಿನ ಅವಧಿಗೆ ವಸತಿ ಗೃಹದಲ್ಲಿ ವಾಸವನ್ನು ಮುಂದುವರಿಸಲು ಅನುಮತಿ ನೀಡತಕ್ಕುದಲ್ಲ. ಹಂಚಿಕೆ ಪಡೆದವನು ಅವಧಿ ಮೀರಿ ಅಲ್ಲಿಯೇ ಉಳಿದರೆ, ಹಾಗೆ ಹೆಚ್ಚಿಗೆ ಉಳಿದ ಅವಧಿಗೆ ಆತನ ಸ್ವಂತ ಮನೆಯನ್ನು ಬಾಡಿಗೆಗೆ ನೀಡುವ ಮೂಲಕ ಅವನು ಪಡೆಯುವ ವಾಸ್ತವಿಕ ಬಾಡಿಗೆಯ ಎರಡರಷ್ಟಕ್ಕೆ ಸಮನಾದ ಲೈಸನ್ಸ್ ಶುಲ್ಕವನ್ನು ಸಂದಾಯ ಮಾಡತಕ್ಕುದು. ಸರ್ಕಾರವು ಈ ಉಪ-ನಿಯಮದ ಅಡಿಯಲ್ಲಿನ ಹಂಚಿಕೆಯ ಉದ್ದೇಶಕ್ಕಾಗಿ ಒಂದು ಅಥವಾ ಹೆಚ್ಚಿನ ಪ್ರವರ್ಗಗಳಲ್ಲಿ ಅಂಥ ಸಂಖ್ಯೆಯ ವಸತಿ ಗೃಹಗಳನ್ನು ಕಾಲಕಾಲಕ್ಕೆ ಮೀಸಲಿರಿಸತಕ್ಕುದು.

**8.ಹುದ್ದೆಯೊಂದಿಗೆ ಕೊನೆಗೊಳ್ಳುವ ಹಂಚಿಕೆ**-(1) [illegible]ಮಿತಿಯು, ಮುಖ್ಯ ಮಂತ್ರಿಗಳು,ಉಪ ಮುಖ್ಯಮಂತ್ರಿಗಳು ವಿಧಾನ ಪರಿಷತ್ತಿನ ಸಭಾಪತಿ, ಉಪ ಸಭಾಪತಿ, ವಿಧಾನ ಸಭೆಯ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ರಾಜ್ಯ ವಿಧಾನ ಮಂಡ[illegible]ದ ಉಭಯ ಸದನಗಳ ಸರ್ಕಾರದ ಮುಖ್ಯ ಸಚೇತಕರು, ರಾಜ್ಯ ಸಚಿವರು ಮತ್ತು ಉಪ ಸಚಿವರು ಮತ್ತು ಸರ್ಕಾರದ ಕಾರ್ಯದರ್ಶಿಗಳು-ಇವರ ಸಿಬ್ಬಂದಿ ವರ್ಗಕ್ಕೆ ಸೇರಿದ ಸರ್ಕಾರಿ ನೌಕರರಿಗೆ ಸರದಿಯನ್ನುಲ್ಲಂಘಿಸಿ ಸರ್ಕಾರಿ ವಸತಿ ಗೃಹಗಳನ್ನು ಹಂಚಿಕೆ ಮಾಡಬಹುದು. ಆದರೆ ಹಂಚಿಕೆ ಪಡೆದವನು [illegible]ತಹ ಸಿಬ್ಬಂದಿ ವರ್ಗಕ್ಕೆ ಸೇರಿದ ಸದಸ್ಯನಾಗಿರುವುದು ರದ್ದುಗೊಂಡ ತಕ್ಷಣ ಹಾಗೆ ಮಾಡಲಾದ ಹಂಚಿಕೆಯು ರದ್ದುಗೊಳ್ಳುವುದೆಂದು ಭಾವಿಸತ್ತಕ್ಕುದೆಂಬ ನಿರ್ದಿಷ್ಟ ಷರತ್ತಿಗೆ ಒಳಪಟ್ಟಿರತಕ್ಕುದು. ಈ ಉದ್ದೇಶಕ್ಕಾಗಿ ಪ್ರತ್ಯೇಕವಾಗಿ ಇಡತಕ್ಕ ಎಲ್ಲ ನಮೂನೆಯ ವಸತಿ ಗೃಹಗಳನ್ನು ಒಳಗೊಂಡ ವಸತಿ ಗೃಹಗಳ ಸಂಖ್ಯೆ ಗರಿಷ್ಠ ನೂರು (100) ಇರತಕ್ಕುದು. ಮೇಲೆ ನಮೂದಿಸಿದ ಸಿಬ್ಬಂದಿ ವರ್ಗದಲ್ಲಿರುವ ಈ ಸರ್ಕಾರಿ ನೌಕರರು ಅವರು ಅಥವಾ ಅವರ ಕುಟುಂಬದ ಯಾವೊಬ್ಬ ಸದಸ್ಯನು ಬೆಂಗಳೂರಿನಲ್ಲಿ ಮನೆಯನ್ನು ಹೊಂದಿದ್ದರೆ, ಅವರಿಗೆ ಮೇಲಿನಂತೆ ಸರದಿ ಮೀರಿ ಸರ್ಕಾರಿ ವಸತಿ ಗೃಹಗಳ ಹಂಚಿಕೆ ಮಾಡತಕ್ಕುದ್ದಲ್ಲ ಆದರೆ, ಅಂಥ ಸಿಬ್ಬಂದಿ ವರ್ಗದಲ್ಲಿರುವ ಸರ್ಕಾರಿ ನೌಕರನು ಹುದ್ದೆಯೊಂದಿಗೆ ಕೊನೆಗೊಳ್ಳುವ ಅಂಥ ಹಂಚಿಕೆಯನ್ನು ಹಕ್ಕು ಎಂಬುದಾಗಿ ಬೇಡತಕ್ಕುದಲ್ಲ. ಹಾಗೂ ಈ ಸಂಬಂಧದಲ್ಲಿ ಹಂಚಿಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರತಕ್ಕುದು.

(2) ಹಂಚಿಕೆ ಪಡೆದವರಿಗೆ ಅಂಥ ವಸತಿ ಗೃಹಗಳಲ್ಲಿ ವಾಸಿಸುವ ಅವಧಿಯಲ್ಲಿ, ಈ ನಿಯಮಗಳಲ್ಲಿ ನಿಯಮಿಸಲಾಗಿರುವ ಹಂಚಿಕೆಯ ಇತರ ಷರತ್ತುಗಳನ್ನು ಅನ್ವಯಿಸತಕ್ಕುದು.

ಆದರೆ, ಈಗಾಗಲೇ ಬೆಂಗಳೂರಿನಲ್ಲಿ ಸೇವೆ ಸಲ್ಲಿಸುತ್ತಿದ್ದು ಸರ್ಕಾರಿ ವಸತಿ ಗೃಹದಲ್ಲಿ ವಾಸವಿರುವ ಸರ್ಕಾರಿ ನೌಕರನಿಗೆ ಈ ನಿಯಮದ ಮೇರೆಗೆ ಯಾವ ಹಂಚಿಕೆಯನ್ನೂ ಮಾಡತಕ್ಕುದಲ್ಲ.

**9. ಲೈಸೆನ್ಸ್ ಶುಲ್ಕದ ಸಂದಾಯ**- (1) ಹಂಚಿಕೆ ಪಡೆದವರ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ಲೆಸೆನ್ಸ್ ಶುಲ್ಕವು, ಅವರ ಒಟ್ಟು ಮಾಸಿಕ ವೇತನದ ಶೇಕಡಾ 10 ರಷ್ಟು ಅಥವಾ ಮನೆಬಾಡಿಗೆ ಭತ್ಯಕ್ಕೆ ಸಮನಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಅದಾಗಿರತಕ್ಕುದು.

(2)13 ನೇ ನಿಯಮದಲ್ಲಿ ಏನೇ ಇದ್ದರೂ, ಸರ್ಕಾರಿ ವಸತಿ ಗೃಹದಲ್ಲಿ ವಾಸವಿರುವ ಹಂಚಿಕೆ ಪಡೆದವನು ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನು ಯಾವುದೇ ರೀತಿಯಿಂದ ವಾಸದ ಮನೆಯನ್ನು ಆರ್ಜಿಸಿದ್ದು, ಅನಂತರ ವಸತಿ ಗೃಹವನ್ನು ಖಾಲಿ ಮಾಡದಿದ್ದರೆ, ಅವನು, ಅವನ ಮನೆಯಿಂದ ಪಡೆಯುವ ಬಾಡಿಗೆಯ ಮೊತ್ತಕ್ಕೆ ಸಮನಾದಷ್ಟು ಲೆಸೆನ್ಸ್ ಶುಲ್ಕವನ್ನು ಸಂದಾಯ ಮಾಡಲು ಬದ್ಧನಾಗಿರತಕ್ಕುದು.

10. ಹಂಚಿಕೆಯನ್ನು ಕೊನೆಗೊಳಿಸುವುದು-(1) ಹಂಚಿಕೆ ಪಡೆದವನು,

(ಎ) ಸರ್ಕಾರಿ ಸೇವೆಯಿಂದ ನಿವೃತ್ತನಾದಾಗ;

(ಬಿ) ರಾಜೀನಾಮೆ ಅಥವಾ ಇತರ ಯಾವುದೇ ಕಾರಣಗಳಿಂದ ಸರ್ಕಾರಿ ಸೇವೆಯಲ್ಲಿರುವುದು ರದ್ದುಗೊಂಡಾಗ;

(ಸಿ) ಬೆಂಗಳೂರಿನಿಂದ ಹೊರಗೆ ವರ್ಗಾವಣೆಗೊಂಡಾಗ ಅಥವಾ ಬೆಂಗಳೂರಿನಲ್ಲಿರುವ ಗೊತ್ತುಪಡಿಸಿದ ವಸತಿ ಗೃಹವಿರುವಂಥ ಹುದ್ದೆಗೆ ವರ್ಗಾವಣೆಗೊಂಡಾಗ;

(ಡಿ) ಅವನಿಗೆ ಹಂಚಿಕೆಯಾದ ವಸತಿ ಗೃಹವನ್ನು ಒಳ ಬಾಡಿಗೆಗೆ ಕೊಟ್ಟಾಗ ಅಥವಾ ಅದರಲ್ಲಿ ವಾಸಿಸಲು ಇತರ ಅನಧಿಕೃತ ವ್ಯಕ್ತಿಗಳಿಗೆ ಅನುಮತಿಸಿದಾಗ;

(ಇ) ಬೆಂಗಳೂರು ಮಹಾನಗರ ಪಾಲಿಕೆ ಅಥವಾ ಬೆಂಗಳೂರು ನಗರದ ಯಾವುದೇ ಉಪ ನಗರಗಳಲ್ಲಿ ಅವನಿಗೆ ಅಥವಾ ಅವನ ಹೆಂಡತಿ ಅಥವಾ ಅವನ ಅವಲಂಬಿತ ಮಕ್ಕಳ ವಾಸಕ್ಕಾಗಿ ಅವನ ಸ್ವಂತ ಹೆಸರಿನಲ್ಲಿ ಅಥವಾ ಅವನ ಅಥವಾ ಅವಳ ಹೆಂಡತಿ ಅಥವಾ ಪತಿಯ ಅಥವಾ ಮಕ್ಕಳ ಹೆಸರಿನಲ್ಲಿ ಒಂದು ಮನೆ ಅಥವಾ ವಾಸಿಸಲು ಇತರ ಸ್ಥಳದ ಮಾಲೀಕನಾದಾಗ ಅಥವಾ ಅರ್ಜಿಸಿದಾಗ;

(ಎಫ್) ಅವನು ಕುಟುಂಬವನ್ನು ಇಲ್ಲಿಯೇ ಬಿಟ್ಟು ಹೊರತು, ಒಂದು ವರ್ಷ ಅಥವಾ ಅದಕ್ಕೂ ಹೆಚ್ಚು ಅವಧಿಗೆ ವಿದೇಶಕ್ಕೆ ತೆರಳಿದಾಗ;

--ಹಂಚಿಕೆಯನ್ನು ಕೊನೆಗೊಳಿಸಲಾಗಿದೆ ಎಂದು ಭಾವಿಸತಕ್ಕುದು.

(2) ಹಂಚಿಕೆ ಪಡೆದವನಿಗೆ ಹಂಚಿಕೆಯು ಕೊನೆಗೊಂಡ ಮೂವತ್ತು ದಿನಗಳಿಗಿಂತ ಹೆಚ್ಚಿಲ್ಲದ ಅವಧಿಗೆ ವಸತಿ ಗೃಹದಲ್ಲಿ ವಾಸಿಸಲು ಅನುಮತಿಸಬಹುದು ಮತ್ತು ಅವನು ಆ ನಂತರ ವಸತಿ ಗೃಹವನ್ನು ಖಾಲಿ ಮಾಡಿ ಅದರ ಸ್ವಾಧೀನತೆಯನ್ನು ಸರ್ಕಾರಕ್ಕೆ ಒಪ್ಪಿಸಲು ಬದ್ಧನಾಗಿರತಕ್ಕುದು.

(3) ಹಂಚಿಕೆ ಪಡೆದ ಯಾವೊಬ್ಬ ವ್ಯಕ್ತಿ ಈ ನಿಯಮಗಳನ್ನು ಉಲ್ಲಂಘಿಸಿ ಅವಧಿ ಮೀರಿ ವಸತಿ ಗೃಹದಲ್ಲಿ ಉಳಿದುಕೊಂಡರೆ, ಕ್ಷಿಪ್ರವಾಗಿ ಹೊರಹಾಕಲ್ಪಡಲು ಅವನು ಬದ್ಧನಾಗಿರತಕ್ಕುದು ಮತ್ತು ಅಂತಹ ಅವಧಿ ಮೀರಿದ ವಾಸವು ದುರ್ವರ್ತನೆ ಎಂದು ಪರಿಗಣಿತವಾಗಿ ನಿಯಮಗಳ ಅನುಸಾರ ಶಿಸ್ತಿನ ಕ್ರಮಕ್ಕೆ ಒಳಪಡಲು ಅವನು ಬದ್ಧನಾಗಿರತಕ್ಕುದು.

11. ಹಂಚಿಕೆ ಪಡೆದವನ ವರ್ಗಾವಣೆ-(1) ಹಂಚಿಕೆ ಪಡೆದವನು ಬೆಂಗಳೂರಿನಿಂದ ಹೊರಗೆ ವರ್ಗಾವಣೆ ಹೊಂದಿದಾಗ, ಅವನು ಹಾಗೆ ವರ್ಗಾವಣೆಯಾದ ಹತ್ತು ದಿನಗಳೊಳಗಾಗಿ ಸರ್ಕಾರಿ ವಸತಿ ಗೃಹವನ್ನು ಖಾಲಿ ಮಾಡುವ ಸಂಭವವಿರುವ, ಆದರೆ (2) ನೇ ಉಪ-ನಿಯಮದಲ್ಲಿ ನಿರ್ದಿಷ್ಟಪಡಿಸಿರುವ ಅವಧಿಗಿಂತ ತರುವಾಯದ್ದಲ್ಲದ ದಿನಾಂಕವನ್ನು ಅವನು ಹಂಚಿಕೆ ಸಮಿತಿಗೆ ತಿಳಿಸತಕ್ಕುದು.

(2) ಹಂಚಿಕೆ ಪಡೆದವನು ವರ್ಗಾವಣೆಯ ನಂತರ ಸಾಮಾನ್ಯ ದರದಲ್ಲಿ ಬಾಡಿಗೆ ಸಂದಾಯ ಮಾಡಿ ತನ್ನ ವಸತಿ ಗೃಹದಲ್ಲಿ ವಾಸವನ್ನು ಒಂದು ತಿಂಗಳು ಮಾತ್ರ ಮುಂದುವರಿಸಲು ಅವನಿಗೆ ಅನುಮತಿಸಬಹುದು.

(12)

**12. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ವರ್ಗಾವಣೆ**-10ನೆಯ ನಿಯಮದಲ್ಲಿ ಏನೇ ಇದ್ದರೂ ಸರ್ಕಾರಿ ವಸತಿ ಗೃಹದಲ್ಲಿ ವಾಸಿಸುತ್ತಿರುವ ಹಂಚಿಕೆ ಪಡೆದವನಿಗೆ ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಬೆಂಗಳೂರಿನಿಂದ ಹೊರಗೆ ವರ್ಗವಾದಲ್ಲಿ ಅಥವಾ ನಿವೃತ್ತನಾದಲ್ಲಿ, ಹಂಚಿಕೆ ಸಮಿತಿಯು ಅಂಥವರಿಗೆ ಸಾಮಾನ್ಯ ಲೆಸೆನ್ಸ್ ಶುಲ್ಕದಲ್ಲಿಯೇ ಆ ಶೈಕ್ಷಣಿಕ ವರ್ಷ ಮುಕ್ತಾಯಗೊಳ್ಳುವವರೆಗೆ ಮಾತ್ರವೇ ವಾಸವನ್ನು ಮುಂದುವರಿಸಲು ಅನುಮತಿ ನೀಡಬಹುದಾಗಿದೆ.

ಪರಂತು, ಸರ್ಕಾರಿ ವಸತಿ ಗೃಹವನ್ನು ಹಂಚಿಕೆ ಪಡೆದ ಸರ್ಕಾರಿ ನೌಕರನು ಸೇವೆಯಿಂದ ನಿವೃತ್ತನಾಗಿದ್ದು ಹಾಗೂ ಈ ಮೇಲ್ಕಂಡಂತೆ ಸರ್ಕಾರಿ ವಸತಿ ಗೃಹದಲ್ಲಿ ವಾಸಿಸಲು ಅನುಮತಿ ನೀಡಲಾಗಿದ್ದಲ್ಲಿ, ವಿದ್ಯುಚ್ಛಕ್ತಿ ಹಾಗೂ ನೀರು ಪೂರೈಕೆಯ ಸಂಬಂಧದಲ್ಲಿ ತಗಲುತ್ತಿದ್ದ ಮೊತ್ತವನ್ನು ಸರಾಸರಿ ಮಾಸಿಕ ಬಳಕೆ ದರಗಳಲ್ಲಿ ಲೆಕ್ಕ ಹಾಕಿ ಮೊತ್ತವನ್ನು ಠೇವಣಿಯಂತೆ ಪಡೆಯತಕ್ಕದ್ದು ಮತ್ತು ಇದನ್ನು ವಾಸ್ತವವಾಗಿ ಸರ್ಕಾರಿ ವಸತಿ ಗೃಹವನ್ನು ತೆರವು ಮಾಡಿ, ಬೀಗದ ಕೈ ಒಪ್ಪಿಸುವ ಸಮಯದಲ್ಲಿ ಸರಿಹೊಂದಿಸತಕ್ಕುದು ಹಾಗೂ ಅಂತಿಮವಾಗಿ ಇತ್ಯರ್ಥಪಡಿಸತಕ್ಕುದು.

**13. ದಂಡ ರೂಪದ ಲೆಸೆನ್ಸು ಶುಲ್ಕ**-9ನೇ ನಿಯಮದ (3) ನೆಯ ಉಪ-ನಿಯಮ ಅಥವಾ 22ನೆಯ ನಿಯಮಕ್ಕೆ ಪ್ರತಿಕೂಲವಾಗದಂತೆ, ಸರ್ಕಾರಿ ವಸತಿ ಗೃಹವನ್ನು ಹಂಚಿಕೆ ಪಡೆದವನು ಈ ನಿಯಮಗಳನ್ನು ಉಲ್ಲಂಘಿಸಿ ಹೆಚ್ಚಿನ ಅವಧಿಗೆ ವಾಸಿಸಿವ ಮೊದಲ ಮೂರು ತಿಂಗಳ ಅವಧಿಗೆ ಸಾಮಾನ್ಯ ಲೈಸೆನ್ಸು ಶುಲ್ಕದ ಎರಡರಷ್ಟು ಸಂದಾಯ ಮಾಡಲು ಬದ್ಧನಾಗಿರತಕ್ಕುದು. ಅದರ ನಂತರ ಮುಂದಿನ ಮೂರು ತಿಂಗಳಿಗೆ ಇದು ಸಾಮಾನ್ಯ ಲೈಸೆನ್ಸು ಶುಲ್ಕದ ನಾಲ್ಕು ಪಟ್ಟು. ಅದನ್ನು ಮೀರಿದರೆ, ಸಾಮಾನ್ಯ ಲೈಸೆನ್ಸು ಶುಲ್ಕದ ಎಂಟು ಪಟ್ಟು.

**14. ಲೆಸೆನ್ಸು ಶುಲ್ಕವನ್ನು ಎಂದಿನಿಂದ ವಿಧಿಸಲಾಗುವುದು**-ಸರ್ಕಾರಿ ವಸತಿ ಗೃಹದ ಮೇಲಿನ ಲೈಸೆನ್ಸು ಶುಲ್ಕವನ್ನು ಆ ಕಟ್ಟಡದ ಪ್ರಭಾರ ಹೊಂದಿರುವ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್‌ನಿಂದ ವಸತಿ ಗೃಹವನ್ನು ಸ್ವಾಧೀನ ಪಡೆದ ದಿನಾಂಕದಿಂದ ಹಂಚಿಕೆ ಪಡೆದವನಿಗೆ ವಿಧಿಸತಕ್ಕುದು.

**15. ಹಂಚಿಕೆ ಪಡೆದವನು ಬೀಗದ ಕೈಯನ್ನು ಒಪ್ಪಿಸುವುದು**- ಸರ್ಕಾರಿ ವಸತಿ ಗೃಹವನ್ನು ಹಂಚಿಕೆ ಪಡೆದವನು ಈ ನಿಯಮಗಳಗನುಸಾರವಾಗಿ ಹಂಚಿಕೆಯು ರದ್ದಾದ ನಂತರ, ಕೂಡಲೇ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್ ಅಥವಾ ಆ ಕಟ್ಟಡದ ಪ್ರಭಾರವನ್ನು ಹೊಂದಿರುವ ಎಂಜನಿಯರ್‌ನಿಗೆ ಆ ಆವರಣದ ಬೀಗದ ಕೈಯನ್ನು ಒಪ್ಪಿಸತಕ್ಕದು.

**16. ಸರ್ಕಾರಿ ವಸತಿ ಗೃಹದ ಹಂಚಿಕೆ ಪಡೆದವನಿಂದ ಉಪದ್ರವ, ಇತ್ಯಾದಿ**-ಹಂಚಿಕೆ ಪಡೆದವನು ತನಗೆ ಹಂಚಿಕೆಯಾದ ಕಟ್ಟಡದಲ್ಲಿ ಯಾವುದೇ ಉಪದ್ರವ ಉಂಟುಮಾಡಿದರೆ ಅಥವಾ ಉಪದ್ರವ ಉಂಟು ಮಾಡುವ ಯಾವುದೇ ಕೃತ್ಯವನ್ನು ಎಸಗಲು ಯಾವೊಬ್ಬ ವ್ಯಕ್ತಿಗೆ ಅನುಮತಿ ನೀಡಿದರೆ, ನೋಟೀಸು ಇಲ್ಲವೇ ಆ ಕೂಡಲೇ ಅವನು ತೆರವು ಮಾಡುವುದಕ್ಕೆ ಬದ್ಧನಾಗಿರತಕ್ಕುದು.

ವಿವರಣೆ- "ಉಪದ್ರವ" ಎಂಬುದು ಆ ಕಟ್ಟಡವನ್ನು ಯಾವ ಉದ್ದೇಶಕ್ಕಾಗಿ ಹಂಚಿಕೆ ಮಾಡಲಾಗಿದೆಯೋ ಅದರ ಹೊರತು ಯಾವುದೇ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ಒಳಗೊಳ್ಳುತ್ತದೆ.

**17. ಲೆಸೆನ್ಸು ಶುಲ್ಕ, ಇತ್ಯಾದಿಗಳ ವಸೂಲಿಯ ಸಂಬಂಧದಲ್ಲಿ ಇಲಾಖಾ ಮುಖ್ಯಸ್ಥರ :ಹಣ ತೆಗೆಯುವ ಅಧಿಕಾರಿಗಳ ಜವಾಬ್ದಾರಿ**-(1) ಸರ್ಕಾರಿ ವಸತಿ ಗೃಹದ ಹಂಚಿಕೆ

ಪಡೆದವನ ಅಥವಾ ಯಾವುದೇ ಕಾರಣಕ್ಕಾಗಿ ಸೇವೆಯಲ್ಲಿರುವುದು ನಿಂತು ಹೋದವನ ಸಂಬಂಧದಲ್ಲಿ ಅಂಥವರ ವರ್ಗಾವಣೆ: ನಿವೃತ್ತಿ: ಮರಣದ ಸಂಗತಿಯನ್ನು ಈ ಕೂಡಲೇ ಆಯಾ ಹಂಚಿಕೆ ಸಮಿತಿಯ ಸದಸ್ಯ ಕಾರ್ಯದರ್ಶಿಯವರಿಗೆ ಎಂದರೆ ಸಂದರ್ಭಾನುಸಾರ, ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು), ಸೂಪರಿಂಟೆಂಡಿಂಗ್ ಎಂಜಿನಿಯರು ಕಟ್ಟಡಗಳ ವೃತ್ತ, ಬೆಂಗಳೂರು ಇವರುಗಳಿಗೆ ತಿಳಿಯಪಡಿಸುವುದು ಸಂಬಂಧಿಸಿದ ಇಲಾಖಾ ಮುಖ್ಯಸ್ಥರ; ಹಣ ತೆಗೆಯುವ ಅಧಿಕಾರಿಯ ಜವಾಬ್ದಾರಿಯಾಗಿರತಕ್ಕುದು.

(2) ಸರ್ಕಾರಿ ವಸತಿ ಗೃಹವನ್ನು ಹಂಚಿಕೆ ಪಡೆದಿರುವ ಸರ್ಕಾರಿ ನೌಕರನು, ತಾನು ವಾಸಿಸಿರುವ ಸರ್ಕಾರಿ ವಸತಿ ಗೃಹದ ಸಂಬಂಧದಲ್ಲಿ ಹಿಂದಿನ ತಿಂಗಳಿನ ಲೈಸೆನ್ಸು ಶುಲ್ಕವನ್ನು ತನ್ನ ವೇತನದ ಬಿಲ್ಲಿನಲ್ಲಿ ಕ್ರಮಬದ್ಧವಾಗಿ ಕಡಿತ ಮಾಡಿರುವುದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸುವ ಪ್ರಮಾಣ ಪತ್ರವೊಂದನ್ನು ಸಂಬಂಧಿಸಿದ ಕಾರ್ಯನಿರ್ವಾಹಕ ಎಂಜಿನಿಯರರಿಗೆ ಸಲ್ಲಿಸತಕ್ಕುದು. ಹಂಚಿಕೆ ಪಡೆದ ಸರ್ಕಾರಿ ನೌಕರನು ಸ್ವಯಂವೇತನ ತೆಗೆಯುವ ಅಧಿಕಾರಿಯಾಗಿದ್ದ ಪಕ್ಷದಲ್ಲಿ ಅಂಥ ಪ್ರಮಾಣ ಪತ್ರವು ಸಂಬಂಧಪಟ್ಟ ಹಣ ತೆಗೆಯುವ ಅಧಿಕಾರಿಯ ಓಂಬರಹವನ್ನು ಹೊಂದಿರತಕ್ಕುದು.

(3) ಸರ್ಕಾರಿ ವಸತಿ ಗೃಹದ ಹಂಚಿಕೆ ಪಡೆದಿರುವ ನೌಕರನ ವೇತನವನ್ನು ಮಹಾಲೇಖಾಪಾಲರಿಂದ ತೆಗೆಯಲಾಗುತ್ತಿದ್ದಲ್ಲಿ ಅಂಥವರು, ಪ್ರತಿ ಮೂರು ತಿಂಗಳಿಗೊಮ್ಮೆ (ಎಂದರೆ ಜನವರಿ, ಏಪ್ರಿಲ್, ಜುಲೈ ಹಾಗೂ ಅಕ್ಟೋಬರ್) ತಾನು ವಾಸಿಸುತ್ತಿದ್ದ ಸರ್ಕಾರಿ ವಸತಿ ಗೃಹದ ಸಂಬಂಧದಲ್ಲಿ ಹಿಂದಿನ ತಿಂಗಳಿನ ಲೈಸೆನ್ಸು ಶುಲ್ಕವನ್ನು ತನ್ನ ವೇತನದಲ್ಲಿ ಕಡಿತಮಾಡಲಾಗಿದೆಯೆಂಬ ಒಂದು ಪ್ರಮಾಣ ಪತ್ರವನ್ನು ಸಂಬಂಧಿಸಿದ ಕಾರ್ಯನಿರ್ವಾಹಕ ಎಂಜಿನಿಯರನಿಗೆ ಸಲ್ಲಿಸತಕ್ಕುದು.

(4) ಹಣ ತೆಗೆಯುವ ಅಧಿಕಾರಿಯು, ನಮೂನೆ ಕೆಎಫ್‌ಸಿ ಸಂಖ್ಯೆ 7 (ಅನುಚ್ಛೇದ II ರಲ್ಲಿ ಸರ್ಕಾರಿ ವಸತಿ ಗೃಹದ ಲೈಸೆನ್ಸ್ ಶುಲ್ಕ ಹಾಗೂ ನೀರು ಪೂರೈಕೆ ದರಗಳ ಮಾಸಿಕ ವಸೂಲಾತಿ ಹೇಳಿಕೆಯನ್ನು ಸಂಬಂಧಿಸಿದ ಕಾರ್ಯನಿರ್ವಾಹಕ ಎಂಜಿನಿಯರನಿಗೆ ಅದರ ಮುಂದಿನ ತಿಂಗಳ 10 ರಂದು ಅಥವಾ ಅದಕ್ಕೂ ಮೊದಲು ತಪ್ಪದೇ ನಿಯತವಾಗಿ ಕಳುಹಿಸಿಕೊಡತಕ್ಕುದು.

(5) ಹಣ ತೆಗೆಯುವ ಅಧಿಕಾರಿಯು, ಮೇಲಿನಂತೆ ತಿಳಿಯಪಡಿಸಲು ತಪ್ಪಿದಲ್ಲಿ, ಸಂಬಂಧಪಟ್ಟ ಕಾರ್ಯನಿರ್ವಾಹಕ ಇಂಜಿನಿಯರನು ಅವಶ್ಯವೆನಿಸಬಹುದಾದಂತಹ ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗಿ ಸಂಬಂಧಪಟ್ಟ ಹಂಚಿಕೆ ಸಮಿತಿಯ ಗಮನಕ್ಕೆ ಈ ವಿಷಯವನ್ನು ತರತಕ್ಕುದು.

**18. ಠೇವಣಿಗಳು**-ಹಂಚಿಕೆ ಪಡೆದ ನೌಕರರು, ವಸತಿ ಗೃಹವನ್ನು ವಶಕ್ಕೆ ತೆಗೆದುಕೊಳ್ಳುವ ಮೊದಲು ಸಂಬಂಧಿಸಿದ ಕಾರ್ಯನಿರ್ವಾಹಕ ಎಂಜಿನಿಯರನಲ್ಲಿ ಜಮಾ ಮಾಡಬೇಕಾದ ಪ್ರಾರಂಭಿಕ ಠೇವಣಿಗಳು ಈ ಮುಂದಿನಂತಿವೆ.-

| | |
|---|---|
| 1. ಎ ಗುಂಪಿನ ಅಧಿಕಾರಿಗಳು | 5000 ರೂ. |
| 2. ಬಿ ಗುಂಪಿನ ಅಧಿಕಾರಿಗಳು | 2500 ರೂ. |
| 3. ಸಿ ಗುಂಪಿನ ನೌಕರರು | 1000 ರೂ. |
| 4. ಡಿ ಗುಂಪಿನ ನೌಕರರು | 500 ರೂ. |

**19. ಮನೆಯನ್ನು ಸರಿಯಾಗಿ ಇಟ್ಟುಕೊಳ್ಳುವುದು**.-(1) ಹಂಚಿಕೆ ಪಡೆದವನು ಸರ್ಕಾರಿ

ಇಟ್ಟುಕೊಳ್ಳುವುದಕ್ಕೆ ಹಾಗೂ ನಿರ್ವಹಿಸುವುದಕ್ಕೆ ಜವಾಬ್ದಾರನಾಗಿರತಕ್ಕುದು ಹಾಗೂ ಆ ಕಟ್ಟಡಕ್ಕಾದ ಯಾವುದೇ ಹಾನಿಗೆ ಅವನು ಹೊಣೆಗಾರನಾಗಿರತಕ್ಕುದು.

(2) ಹಂಚಿಕೆಗೆ ಪಡೆದವನು ಆ ಮನೆ: ವಸತಿ ಗೃಹಕ್ಕೆ ಪೂರೈಸಲಾಗಿದ್ದ ವಿದ್ಯುಚ್ಛಕ್ತಿ ಹಾಗೂ ನೀರಿನ ಸಂಬಂಧದಲ್ಲಿನ ಬಿಲ್ಲುಗಳನ್ನು ಆಯಾ ತಿಂಗಳಿನಲ್ಲಿ ಯೇ ಪಾವತಿ ಮಾಡುವ ಬಗ್ಗೆ ಎಚ್ಚರ ವಹಿಸತಕ್ಕುದು.

**20. ಹಂಚಿಕೆ ಪಡೆದವನ ಮರಣ**-ಹಂಚಿಕೆ ಪಡೆದವನು ಸೇವೆಯಲ್ಲಿರುವಾಗ ಮರಣ ಹೊಂದಿದರೆ, ಅವನ ಕುಟುಂಬಕ್ಕೆ ಆ ಮನೆಯಲ್ಲಿ ವಾಸಿಸುವುದಕ್ಕೆ ಗರಿಷ್ಠ ಆರು ತಿಂಗಳು ಅಥವಾ ಆ ಶೈಕ್ಷಣಿಕ ವರ್ಷ ಮುಗಿಯುವವರೆಗೆ ಅವುಗಳಲ್ಲಿ ಯಾವುದು ಅನಂತರದ ಅವಧಿಯೋ ಅಲ್ಲಿಯವರೆಗೆ ಸಾಮಾನ್ಯ ಲೈಸೆನ್ಸು ಶುಲ್ಕ ಸಂದಾಯ ಮಾಡಿ ವಾಸಿಸಲು ಇತರ ಷರತ್ತಿಗೊಳಪಟ್ಟು ಅನುಮತಿಸತಕ್ಕುದು.

**21. ಕಟ್ಟಡಗಳ ನಿರ್ವಹಣೆ, ಇತ್ಯಾದಿ**-(1) ಕಟ್ಟಡಗಳ ಪ್ರಭಾರದಲ್ಲಿರುವ ಕಾರ್ಯನಿರ್ವಾಹಕ ಇಂಜನಿಯರನು, ಈ ನಿಯಮಗಳ ಮೇರೆಗೆ ವಸತಿ ಗೃಹಗಳ ನಿರ್ವಹಣೆ ಲೈಸೆನ್ಸು ಶುಲ್ಕದ ವಸೂಲಿ, ತೆರವು ಮಾಡಿಸುವ ವ್ಯವಹರಣೆಗಳು, ಇತ್ಯಾದಿಗಳ ಸಂಬಂಧದಲ್ಲಿ ಕ್ರಮಕೈಗೊಳ್ಳಲು ಹಾಗೂ ಅವಶ್ಯವಿರುವ ಕಡೆಯಲ್ಲಿ ಈ ನಿಯಮಗಳನ್ನು ಜಾರಿಗೊಳಿಸಲು ಅಗತ್ಯವಿರುವಂಥ ನೆರವನ್ನು ಪಡೆಯಲು ಅಧಿಕಾರ ಹೊಂದಿರತಕ್ಕುದು.

(2) ಕಾರ್ಯನಿರ್ವಾಹಕ ಎಂಜಿನಿಯರನು ಸರ್ಕಾರಕ್ಕೆ ಮತ್ತು ಡಿವಿಜನಲ್ ಕಮೀಷನರ್ ಬೆಂಗಳೂರು ವಿಭಾಗ, ಬೆಂಗಳೂರು ಇವರಿಗೆ ತಾನು ತೆಗೆದುಕೊಂಡ ಕ್ರಮದ ಬಗ್ಗೆ ಮಾಸಿಕ ವರದಿಯನ್ನು ನಿಯತವಾಗಿ ಸಲ್ಲಿಸತಕ್ಕುದು ಮತ್ತು ವಸತಿ ಗೃಹಗಳು ತೆರವಾದಾಗಲೆಲ್ಲಾ, ತೆರವಾದ ವರದಿಯನ್ನು ಕಳುಹಿಸತಕ್ಕುದು.

**22. ಉಪ ಬಾಡಿಗೆ ನೀಡುವುದರ ಪರಿಣಾಮ**-ಹಂಚಿಕೆ ಪಡೆದವನು ತನಗೆ ಹಂಚಿಕೆಯಾದ ಆವರಣವನ್ನು ಉಪಬಾಡಿಗೆಗಾಗಿ ಕೊಟ್ಟಾಗ,

(1) ಅನಧಿಕೃತವಾಗಿ ವಾಸವಿರುವ ಉಪ ಬಾಡಿಗೆದಾರನು ಕ್ಷಿಪ್ರವಾಗಿ ಯಾವುದೇ ಸೂಚನೆಯಿಲ್ಲದೆ ಹೊರಹಾಕಲ್ಪಡುವುದಕ್ಕೆ ಬದ್ಧನಾಗಿರತಕ್ಕುದು.

(2) ಮೂಲವಾಗಿ ಹಂಚಿಕೆ ಪಡೆದವನ ಮೇಲೆ ಸಾಮಾನ್ಯ ಲೈಸೆನ್ಸು ಶುಲ್ಕದ ಎಂಟು ಪಟ್ಟು ದರದಲ್ಲಿ ದಂಡ ರೂಪದ ಲೈಸೆನ್ಸು ಶುಲ್ಕವನ್ನು ಉಪ ಬಾಡಿಗೆ ಕೊಟ್ಟ ಅವಧಿಗೆ ವಿಧಿಸತಕ್ಕುದು ಮತ್ತು ಅದನ್ನು ಅವನ ಸಂಬಳದಿಂದ ಅಥವಾ ಭೂ ಕಂದಾಯ ಬಾಕಿ ಎಂಬಂತೆ ವಸೂಲು ಮಾಡತಕ್ಕುದು.

(3) ಉಪ ಬಾಡಿಗೆಗೆ ಕೊಡುವ ಕೃತ್ಯವನ್ನು ದುರ್ವರ್ತನೆ ಎಂದು ಪರಿಗಣಿಸಿ ಸಂದರ್ಭಾನುಸಾರ ಕೆಸಿಎಸ್ (ಸಿಸಿಎ) ನಿಯಮಗಳು ಅಥವಾ ಎಐಎಸ್(ಡಿ ಮತ್ತು ಎ) ನಿಯಮಗಳ ಮೇರೆಗೆ ಶಿಸ್ತು ಕ್ರಮಕ್ಕೆ ಒಳಪಡಲು ಅವನು ಬದ್ಧನಾಗಿರತಕ್ಕುದು.

**23. ಮನೆಯನ್ನು ಹಂಚಿಕೆ ಮಾಡಲು ಸರ್ಕಾರದ ವಿವೇಚನಾಧಿಕಾರ**-ಹಂಚಿಕೆದಾರನಿಗೆ ತನ್ನ ವಾಸಕ್ಕೆ ನಿರ್ದಿಷ್ಟ ಸ್ಥಳದಲ್ಲಿನ ನಿರ್ದಿಷ್ಟ ವಸತಿ ಗೃಹದ ಹಂಚಿಕೆ ಮಾಡುವಂತೆ ಕೋರುವ ಆಯ್ಕೆ ಅವಕಾಶವಿರತಕ್ಕುದಲ್ಲ. ಸರ್ಕಾರವು ಸರ್ಕಾರಿ ನೌಕರನಿಗೆ ಇರುವ ಸ್ಥಾನಮಾನ ಮತ್ತು ಅವನಿಗಿಂತ ಅರ್ಹತೆಯನ್ನು ಗಮನದಲ್ಲಿರಿಸಿಕೊಂಡು ತೆರವಾದ ಯಾವುದೇ ವಸತಿ ಗೃಹವನ್ನು

ಹಂಚಿಕೆ ಮಾಡುವ ಹಕ್ಕನ್ನು ಸಹ ಸರ್ಕಾರವು ಹೊಂದಿರುತ್ತದೆ.

24. ಸರ್ಕಾರದ ತೀರ್ಮಾನದ ಅಂತಿಮತೆ- ಈ ನಿಯಮಗಳಲ್ಲಿ ನಿರೂಪಿಸಿಲ್ಲದ ವಿಷಯಕ್ಕೆ ಸಂಬಂಧಪಟ್ಟಂತೆ ಈ ನಿಯಮಗಳಿಂದ ಯಾವುದೇ ವಿವಾದವುಂಟಾದರೆ, ತೀರ್ಮಾನಕ್ಕೆ ಅದನ್ನು ಸರ್ಕಾರಕ್ಕೆ ಕಳುಹಿಸತಕ್ಕುದು ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕುದು.

25. ನಿರಸನ ಮತ್ತು ಉಳಿಸುವಿಕೆಗಳು- (1) ಹಳೆಯ ನಿಯಮಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಈ ನಿಯಮಗಳಲ್ಲಿ ಉಪಬಂಧಿಸಿದ ಹೊರತು, ಅಂಥ ನಿರಸನವು-

(ಎ) ಹಳೆಯ ನಿಯಮಗಳ ಈ ಹಿಂದಿನ ಪ್ರವರ್ತನೆಯನ್ನು ಅಥವಾ ಅವರಡಿಯಲ್ಲಿ ಯಥೋಚಿತವಾಗಿ ಮಾಡಿದ ಯಾವುದೇ ಹಿಂದಿನ ಕೃತ್ಯ ಅಥವಾ ಉಂಟಾದ ತೊಂದರೆಯನ್ನು; ಅಥವಾ

(ಬಿ) ಹಳೆ ನಿಯಮಗಳ ಯಾವುದೇ ಉಲ್ಲಂಘನೆಯ ಸಂಬಂಧದಲ್ಲಿ ಭರಿಸಲಾದ ದಂಡ ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕುದಲ್ಲ.

(3) ಹಾಗೆ ನಿರಸನಗೊಂಡಿದ್ದರೂ, ನಿರಸನಗೊಳಿಸಲಾದ ನಿಯಮಗಳ ಮೇರೆಗೆ ಮಾಡಲಾದ ಎಲ್ಲ ಹಂಚಿಕೆಗಳನ್ನು ಈ ನಿಯಮಗಳ ಮೇರೆಗೆ ಮಾಡಲಾದವುಗಳೆಂಬುದಾಗಿ ಭಾವಿಸತಕ್ಕುದು.

26. ಕೆಲವು ವ್ಯವಹರಣೆಗಳನ್ನು ಕೊನೆಗೊಳಿಸುವುದು- ಈ ನಿಯಮಗಳಲ್ಲಿ ಏನೇ ಇದ್ದರೂ,-

(i) 5ನೇ ನಿಯಮದ (9) ನೇ ಉಪ-ನಿಯಮದಲ್ಲಿ ಉಲ್ಲೇಖಿಸಲಾದ ಸರ್ಕಾರಿ ನೌಕರನ ವಿರುದ್ಧ ಹಳೇ ನಿಯಮಗಳಡಿಯಲ್ಲಿ ಹೆಚ್ಚಿನ ಅವಧಿಯ ವಾಸದ ಕಾರಣದ ಮೇಲೆ ಹೊರಹಾಕುವಿಕೆಗಾಗಿ ಈ ನಿಯಮಗಳು ಪ್ರಾರಂಭವಾದ ದಿನಾಂಕದಂದು ಬಾಕಿಯಿರುವ ಯಾವುದೇ ವ್ಯವಹರಣೆಗಳು ಅಂಥ ಪ್ರಾರಂಭದ ತರುವಾಯ ಕೊನೆಗೊಳ್ಳತಕ್ಕುದು ಮತ್ತು ಮುಂದುವರಿಯತಕ್ಕುದಲ್ಲ ಅಥವಾ ಇರತಕ್ಕುದಲ್ಲ.

(ii) 5ನೇ ನಿಯಮದ (9) ನೇ ಉಪ-ನಿಯಮದಲ್ಲಿ ಉಲ್ಲೇಖಿಸಿರುವಂತೆ ಹಳೇ ನಿಯಮಗಳ ಮೇರೆಗೆ ಸರ್ಕಾರಿ ನೌಕರನು ಹೆಚ್ಚಿನ ಅವಧಿಯ ವಾಸವಾಗಿದ್ದುದರ ಸಂಬಂಧದಲ್ಲಿ ಅವನನ್ನು ಹೊರಹಾಕುವ ಯಾವುವೇ ವ್ಯವಹರಣೆಗಳನ್ನು ಅಂಥ ಪ್ರಾರಂಭದ ನಂತರ ಕೈಗೊಳ್ಳತಕ್ಕುದಲ್ಲ.

ಪಿ.ಆರ್. 32.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

-ಸಹಿ-
(ಕೆ.ಕೆ.ಸಲೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ ಇಲಾಖೆ(ಸೇವೆಗಳು-ಎ)

ನವ - 1

(5 ನೇ ನಿಯಮದ (3) ನೇ ಉಪ-ನಿಯಮವನ್ನು ನೋಡಿ)

## ಗ್ರೂಪ್ 'ಎ' ಅಧಿಕಾರಿಗಳಿಗೆ ಸರ್ಕಾರಿ ವಸತಿ ಗೃಹ ಹಂಚಿಕೆಗಾಗಿ ಅರ್ಜಿ (ದ್ವಿಪ್ರತಿಯಲ್ಲಿ)

1. ಅರ್ಜಿದಾರನ ಹೆಸರು, ಅಡ್ಡ ಹೆಸರು ಇದ್ದರೆ ಅದರ ಜೊತೆಯಲ್ಲಿ :

2. ತಂದೆಯ ಹೆಸರು : ಗಂಡನ ಹೆಸರು (ವಿವಾಹಿತ ಉದ್ಯೋಗಸ್ಥ ಮಹಿಳೆಯಾಗಿದ್ದರೆ) :

3. ಹುಟ್ಟಿದ ದಿನಾಂಕ ಮತ್ತು ವಯಸ್ಸು :

4. ಸೇವೆಗೆ ಸೇರಿದ ದಿನಾಂಕ :

5. ಹುದ್ದೆಯ ಹೆಸರು, ಸದರಿ ಹುದ್ದೆಯನ್ನು ಯಾವ ದಿನಾಂಕದಿಂದ ಧಾರಣ ಮಾಡಲಾಗಿದೆ :

6. ಯಾವ ಸೇವೆಗೆ ನಿಯೋಜಿತರಾಗಿದ್ದೀರಿ :

   (ಎ) ರಾಜ್ಯ ಸರ್ಕಾರ :

   (ಬಿ) ಕರ್ನಾಟಕ ಉಚ್ಚ ನ್ಯಾಯಾಲಯ :

   (ಸಿ) ಕರ್ನಾಟಕ ಲೋಕಸೇವಾ ಆಯೋಗ :

   (ಡಿ) ಕರ್ನಾಟಕ ಶಾಸಕಾಂಗ ಸಚಿವಾಲಯ :

7. ಪ್ರಸ್ತುತ ಕಚೇರಿ ವಿಳಾಸ, ದೂರವಾಣಿ ಸಂಖ್ಯೆ ಇದ್ದರೆ :

8. ಬೆಂಗಳೂರಿನಲ್ಲಿ ಸೇವೆಗೆ ಸೇರಿದ ದಿನಾಂಕ :

9. ಅರ್ಜಿದಾರರು ಐ.ಎ.ಎಸ್., ಐ.ಪಿ.ಎಸ್., ಐ.ಎಫ್.ಎಸ್ ಗುಂಪಿಗೆ ಸೇರಿದವರೆ :

10. ಅರ್ಜಿದಾರರು ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿ :

11. ಅರ್ಜಿ ಹಾಕುವ ದಿನಾಂಕದಂದು ಇದ್ದಂತ ಮೂಲ ವೇತನ :

12. ಅರ್ಜಿದಾರನು ತಮ್ಮ ಹೆಸರಿನಲ್ಲಿ ಅಥವಾ ತಮ್ಮ ಕುಟುಂಬದ ಇತರ ಸದಸ್ಯರ ಹೆಸರಿನಲ್ಲಿ ಸ್ವಂತ ಮನೆಯನ್ನು ಹೊಂದಿರುವರು ? ಹಾಗಿದ್ದರೆ, ತಾವೇ ಅದರಲ್ಲಿ ವಾಸವಿಲ್ಲದಿರುವುದಕ್ಕೆ ಕಾರಣ ಕೊಡಿ (ಈ ಬಗ್ಗೆ ಅಫಿಡವಿಟ್ಟನ್ನು ಲಗತ್ತಿಸಿ) :

13. ಅರ್ಜಿದಾರರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರೆ :

14. ಅರ್ಜಿದಾರರು ಅಂಗವಿಕಲರೇ ? ಹಾಗಿದ್ದರೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಒದಗಿಸಿ :

15. ಅರ್ಜಿದಾರರು ಸೂಚಿಸಲು ಇಚ್ಛಿಸುವ ಇತರ ಯಾವುದೇ ವಿವರಗಳು :

## ಘೋಷಣೆ

ನಾನು, ಎಂದರೆ ............................................ ಆದ ನಾನು ಒದಗಿಸಿರುವ ಮೇಲ್ಕಂಡ ವಿವರಗಳು ಸತ್ಯವಾಗಿರುತ್ತವೆ ಎಂದು ಘೋಷಿಸುತ್ತೇನೆ. ಬೆಂಗಳೂರಿನಲ್ಲಿರುವ ಸರ್ಕಾರಿ ವಸತಿ ಗೃಹ ಹಂಚಿಕೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 245 ಪಿಪಿಎಂ 96 ದಿನಾಂಕ 05-12-1998 ರಲ್ಲಿ ಪ್ರಕಟವಾದ ನಿಯಮಗಳನ್ನು ಓದಿದ್ದೇನೆ ಮತ್ತು ಸರ್ಕಾರಿ ವಸತಿ ಗೃಹ ಹಂಚಿಕೆಯಾದಲ್ಲಿ ಹಂಚಿಕೆಯ ನಿಯಮಗಳಿಗೆ ಮತ್ತು ಹಂಚಿಕೆಯ ಷರತ್ತುಗಳಿಗೆ ನಾನು ಬದ್ಧನಾಗಿರುತ್ತೇನೆ.

ಅರ್ಜಿದಾರರ ಸಹಿ

ಸ್ಥಳ :
ದಿನಾಂಕ :

## ನಮೂನೆ - 11

(5 ನೇ ನಿಯಮದ (4) ನೇ ಉಪ-ನಿಯಮವನ್ನು ನೋಡಿ)

### ಗ್ರೂಪ್ 'ಬಿ' 'ಸಿ' 'ಡಿ' ಅಧಿಕಾರಿಗಳು : ನೌಕರರಿಗೆ ಸರ್ಕಾರಿ ವಸತಿ ಗೃಹ ಹಂಚಿಕೆಗಾಗಿ ಅರ್ಜಿ (ದ್ವಿಪ್ರತಿಯಲ್ಲಿ)

1. ಅರ್ಜಿದಾರನ ಹೆಸರು, ಅಡ್ಡ ಹೆಸರು ಇದ್ದರೆ ಅದರ ಜೊತೆಯಲ್ಲಿ :

2. ತಂದೆಯ ಹೆಸರು : ಗಂಡನ ಹೆಸರು (ವಿವಾಹಿತ ಉದ್ಯೋಗಸ್ಥ ಮಹಿಳೆಯಾಗಿದ್ದರೆ) :

3. ಹುಟ್ಟಿದ ದಿನಾಂಕ ಮತ್ತು ವಯಸ್ಸು :

4. ಸೇವೆಗೆ ಸೇರಿದ ದಿನಾಂಕ :

5. ಹುದ್ದೆಯ ಹೆಸರು, ಸದರಿ ಹುದ್ದೆಯನ್ನು ಯಾವ ದಿನಾಂಕದಿಂದ ಧಾರಣ ಮಾಡಲಾಗಿದೆ :

6. ಯಾವ ಸೇವೆಗೆ ನಿಯೋಜಿತರಾಗಿದ್ದೀರಿ :

   (ಎ) ರಾಜ್ಯ ಸರ್ಕಾರ :

   (ಬಿ) ಕರ್ನಾಟಕ ಉಚ್ಚ ನ್ಯಾಯಾಲಯ :

   (ಸಿ) ಕರ್ನಾಟಕ ಲೋಕಸೇವಾ ಆಯೋಗ :

   (ಡಿ) ಕರ್ನಾಟಕ ಶಾಸಕಾಂಗ ಸಚಿವಾಲಯ :

7. ಪ್ರಸ್ತುತ ಕಚೇರಿ ವಿಳಾಸ, ದೂರವಾಣಿ ಸಂಖ್ಯೆ ಇದ್ದರೆ :

8. ಬೆಂಗಳೂರಿನಲ್ಲಿ ಸೇವೆಗೆ ಸೇರಿದ ದಿನಾಂಕ :

9. ಅರ್ಜಿದಾರನು 'ಬಿ' 'ಸಿ' 'ಡಿ' ವರ್ಗಕ್ಕೆ ಸೇರಿದವನೆ? :

10. ಅರ್ಜಿದಾರನು ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿ :

11. ಅರ್ಜಿ ಹಾಕುವ ದಿನಾಂಕದಂದು ಇದ್ದಂತೆ ಮೂಲ ವೇತನ :

12. ಅರ್ಜಿದಾರನು ತನ್ನ ಹೆಸರಿನಲ್ಲಿ ಅಥವಾ ತನ್ನ ಕುಟುಂಬದ ಇತರ ಸದಸ್ಯರ ಹೆಸರಿನಲ್ಲಿ ಸ್ವಂತ ಮನೆಯನ್ನು ಹೊಂದಿರುವನೆ ? ಹಾಗಿದ್ದರೆ, ತಾನೇ ಅದರಲ್ಲಿ ವಾಸವಿಲ್ಲದಿರುವುದಕ್ಕೆ ಕಾರಣ ಕೊಡಿ (ಈ ಬಗ್ಗೆ ಅಫಿಡವಿಟ್ಟನ್ನು ಲಗತ್ತಿಸಿ) :

13. ಅರ್ಜಿದಾರನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವನೆ, ಹಾಗಿದ್ದಲ್ಲಿ ಪ್ರಮಾಣ ಪತ್ರ ಒದಗಿಸಿ :

14. ಅರ್ಜಿದಾರನು ಅಂಗವಿಕಲನೇ ? ಹಾಗಿದ್ದರೆ ಸಕ್ಷಮ ಪ್ರಾಧಿಕಾರದಿಂದ ಪ್ರಮಾಣ ಪತ್ರ ಒದಗಿಸಿ :

15. ಅರ್ಜಿದಾರನು ಅವಿವಾಹಿತನೇ :ಳೆ ವಿಧವೆಯಾದ ಸರ್ಕಾರಿ ನೌಕರಳೆ ? :

16. ಅರ್ಜಿದಾರನು ಸೂಚಿಸಲು ಇಚ್ಛಿಸುವ ಇತರ ಯಾವುದೇ ವಿವರಗಳು :

## ಘೋಷಣೆ

ನಾನು, ಎಂದರೆ ............................................... ಆದ ನಾನು ಒದಗಿಸಿರುವ ಮೇಲ್ಕಂಡ ವಿವರಗಳು ಸತ್ಯವಾಗಿರುತ್ತವೆ ಎಂದು ಘೋಷಿಸುತ್ತೇನೆ. ಬೆಂಗಳೂರಿನಲ್ಲಿರುವ ಸರ್ಕಾರಿ ವಸತಿ ಗೃಹದ ಹಂಚಿಕೆಗೆ ಸಂಬಂಧಿಸಿದಂತೆ ಅಧಿಸೂಚನೆ ಸಂಖ್ಯೆ ಪಿಡಬ್ಲ್ಯೂಡಿ 245 ಪಿಪಿಎಂ 96 ದಿನಾಂಕ 05-12-1998 ರಲ್ಲಿ ಪ್ರಕಟವಾದ ನಿಯಮಗಳನ್ನು ಓದಿದ್ದೇನೆ ಮತ್ತು ಸರ್ಕಾರಿ ವಸತಿ ಗೃಹ ಹಂಚಿಕೆಯಾದಲ್ಲಿ ಹಂಚಿಕೆಯ ನಿಯಮಗಳಿಗೆ ಮತ್ತು ಹಂಚಿಕೆಯ ಷರತ್ತುಗಳಿಗೆ ನಾನು ಬದ್ಧನಾಗಿರುತ್ತೇನೆ.

ಸ್ಥಳ :

ದಿನಾಂಕ :

ಅರ್ಜಿದಾರನ ಸಹಿ